ಬೇಡಿಕೆ ನೀಡಿದ ಸರಕನ್ನು ತೃಪ್ತಿಕರವಾಗಿ ಸರಬರಾಜು ಮಾಡಿದಂತಹ ಸಫಲ ದರ ಟೆಂಡರುದಾರರ ಫಿಡೆಲಿಟಿ ಬಾಂಡನ್ನು/ಬ್ಯಾಂಕ್ ಗ್ಯಾರಂಟಿಯನ್ನು ಏಪ್ರಿಲ್ 2006ರ ಅಂತ್ಯದೊಳಗೆ ವಿಮುಕ್ತಿಗೊಳಿಸಲಾಗುವುದು.

ಬಿಲ್ಲುಗಳ ಪಾವತಿ :

ಸರಬರಾಜುಗಳು ಸ್ವೀಕೃತಿಯಾದ ತರುವಾಯ ಬೇಡಿಕೆ ನೀಡಿದ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಬಿಲ್ಲುಗಳ ಪಾವತಿಯ ಬಗ್ಗೆ ಕ್ರಮ ಕೈಗೊಳ್ಳುವರು. ಸರಕಾರದಿಂದ ಅನುದಾನ ಬಿಡುಗಡೆಯ ಶರ್ತಕ್ಕೆ ಒಳಪಟ್ಟು, ಬೇಡಿಕೆ ನೀಡಿದ ಸರಕನ್ನು ಸರಬರಾಜು ಮಾಡಿರುವುದರಿಂದ ಉದ್ಭವಿಸುವ ಬಿಲ್ಲುಗಳನ್ನು ಸರಕು ಸ್ವೀಕೃತಿಯಾದ 90 ದಿನಗಳೊಳಗೆ ಪಾವತಿಸಲಾಗುವುದು.

ಮೇಲ್ಮನವಿ :

ಅರ್ಹತಾಪೂರ್ವ ಮತ್ತು ದರ ಟೆಂಡರು ಪ್ರಕ್ರಿಯೆಗಳಿಗೆ ಸಂಬಂಧಿಸಿದ ಮೇಲ್ಮನವಿಗಳನ್ನು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ಸಲ್ಲಿಸತಕ್ಕದ್ದು. ಸರಬರಾಜು ಮಾಡಿದ ಮೇಲೆ ಅಥವಾ ಸರಬರಾಜು ಬೇಡಿಕೆಗೆ ಸಂಬಂಧಿಸಿದಂತೆ ವಿವಾದಗಳು ಉದ್ಭವಿಸಿದಲ್ಲಿ ಯಾವ ವೃತ್ತದ ವ್ಯಾಪ್ತಿಯ ವಿಭಾಗಕ್ಕೆ ಸರಬರಾಜು ಸಂಬಂಧಿಸಿದೆಯೋ ಅಂತಹ ವೃತ್ತದ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ಮೇಲ್ಮನವಿಯನ್ನು ಸಲ್ಲಿಸತಕ್ಕದ್ದು.

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ.

ANNEXURE-1

Karnataka Forest Department

Prequalification Tenders to Short List Manufacturers/Agencies/Firms for Supply of Polythene Bags/Sheets, Woven Sacks and to Determine Rate Per Tonne of Polythene Bags/sheets & 1000 Nos. of Woven Sacks

ಅರಣ್ಯ ನರ್ಸರಿ ಕಾಮಗಾರಿಗಳಿಗಾಗಿ 2005–06ನೇ ಸಾಲಿನಲ್ಲಿ ಸರಬರಾಜಿಗಾಗಿ ರೇಟ್ ಟೆಂಡರ್ ದರಗಳನ್ನು ನಮೂದಿಸಬೇಕಾಗಿರುವ ಪಾಲಿಥೀನ್ ಚೀಲ / ಶೀಟ್ ಮತ್ತು ವೂವನ್ ಸ್ಯಾಕ್ಸಗಳ ಅಳತೆ ಮತ್ತು ಗುಣಮಟ್ಟದ ವಿವರ.

1. ಪಾರದರ್ಶಕ ಯು.ವಿ. ಸ್ಟೆಬಿಲೈಸಡ್ ಎಲ್‌ಡಿಪಿಇ ಪಾಲಿಥೀನ್ ಚೀಲ. (ಪ್ರತಿ ಟನ್ನಿಗೆ ದರಗಳನ್ನು ನಮೂದಿಸುವುದು.)

ಪಾಲಿಥೀನ್ ಚೀಲಗಳ ಅಳತೆ (ಇಂಚುಗಳಲ್ಲಿ)	ಗೇಜ್	ಪ್ರತಿ ಕೆ.ಜಿ.ಗೆ ಚೀಲಗಳ ಸರಾಸರಿ ಸಂಖ್ಯೆ	ಷರಾ
4 x 6	200	685	1. ಕೆಳಭಾಗದ ಹೀಟ್ ಸೀಲ್ ದೃಢವಾಗಿದ್ದು ಗ್ಯಾಪ್ ಇಲ್ಲದಂತೆ ಸಂಪೂರ್ಣವಾಗಿರಬೇಕು. ಬ್ಯಾಗುಗಳು ಬಾಕ್ಸ್ ವಿನ್ಯಾಸ ಹೊಂದಿರಬೇಕು. ಸಮರ್ಪಕ ರೀತಿಯಲ್ಲಿ ಒಂದು ಬದಿಯಲ್ಲಿ ಮಾತ್ರ ಚೀಲಗಳ ಬಾಯಿ ತೆರೆದಿರಬೇಕು ಹಾಗೂ ಸೂಕ್ತ ರೀತಿಯಲ್ಲಿ ರಂಧ್ರಗಳನ್ನು ಪಂಚ್ ಮಾಡಿರಬೇಕು. 2. ನರ್ಸರಿ ಅವಧಿಯಲ್ಲಿ ಚೀಲಗಳ ಬಾಳಿಕೆ ದೃಷ್ಟಿಯಿಂದ ಉತ್ತಮ ಗುಣಮಟ್ಟದ ಗ್ರಾನ್ಯೂಲ್‌ಗಳನ್ನು ಬಳಸಿ ತಯಾರಿಸಿರಬೇಕು, ರೀಸೈಕಲ್ ಸಾಮಗ್ರಿ ಅಥವಾ ಗ್ರಾನ್ಯೂಲ್‌ಗಳನ್ನು ಬಳಸಿರಬಾರದು.
5 x 8	240	343	
6 x 9	300	200	
8 x 12	500	60	
9 x 12	500	60	
10 x 16	600	34	

2. ಕಪ್ಪು ಪಾಲಿಥೀನ್ ಶೀಟ್ / ಹಾಳೆಗಳು (ಪ್ರತಿ ಟನ್ನಿಗೆ ದರಗಳನ್ನು ನಮೂದಿಸುವುದು).

ಸೂಕ್ತ ಅಳತೆಯ (ಉದ್ದ ಮತ್ತು ಅಗಲ) ಕಪ್ಪು ಪಾಲಿಥೀನ್ ಶೀಟ್ / ಹಾಳೆಗಳು	ನರ್ಸರಿ ಅವಧಿಯಲ್ಲಿ ಶೀಟ್‌ಗಳ ಬಾಳಿಕೆ ದೃಷ್ಟಿಯಿಂದ ಉತ್ತಮ ಗುಣಮಟ್ಟದ ಗ್ರಾನ್ಯೂಲ್‌ಗಳನ್ನು ಬಳಸಿ ತಯಾರಿಸಿರಬೇಕು, ರೀಸೈಕಲ್ ಸಾಮಗ್ರಿ ಅಥವಾ ಗ್ರಾನ್ಯೂಲ್‌ಗಳನ್ನು ಬಳಸಿರಬಾರದು.

3. 10X10=(1000) ಡೀನಿಯರ್ ಅಳತೆಯ ಒಂದನೇ ದರ್ಜೆ ಲ್ಯಾಮಿನೇಟೆಡ್ ಮೆಶ್‌ನಿಂದ ತಯಾರಿಸಿದ ಹೆಚ್.ಡಿ.ಪಿ.ಇ. ವೋವನ್ ಸ್ಯಾಕ್ಸ್. (ಪ್ರತಿ 1000 ಚೀಲಗಳಿಗೆ ದರಗಳನ್ನು ನಮೂದಿಸುವುದು.)

ಅಳತೆ (ಇಂಚುಗಳಲ್ಲಿ)	ಚೀಲಗಳ ತೂಕ (ಗ್ರಾಂಗಳಲ್ಲಿ)	ಷರಾ
8 x 12	19	ಸೂಚಿತ ಅಳತೆಗಳನ್ನು ನಿಖರವಾಗಿ ಹೊಂದಿರಬೇಕು. ಚೀಲದ ಮೇಲ್ಭಾಗದಲ್ಲಿ ಎಳೆಗಳು ಕಿತ್ತು ಬಾರದಂತೆ ಸೂಕ್ತ ರೀತಿಯಲ್ಲಿ ಮಡಚಿ ಚೀಲದ ಬಾಯಿ ಉದ್ದಕ್ಕೂ ಒಂದು ಹೊಲಿಗೆ ಇರಬೇಕು, ಉಳಿದ ಮೂರು ಬದಿಗಳಲ್ಲಿ ಉತ್ತಮವಾದ ಎರಡು ಹೊಲಿಗೆ ಇದ್ದು ತೆಳುವಾದ ಪಾಲಿ ಒಳ ಹೊದಿಕೆ ಇರುವುದು ಕಡ್ಡಾಯ ಹಾಗೂ ಕನಿಷ್ಟ ನಾಲ್ಕು ಕಡೆ ಪಂಚ್ ಮಾಡಿದ ರಂಧ್ರಗಳಿರಬೇಕು. ಹೊಲಿಗೆಗಳು ನೈಲಾನ್ ದಾರದ ಹೊಲಿಗೆಗಳಾಗಿರಬೇಕು. ನೇಯ್ದ ಚೀಲಗಳು ಬಿಳಿ ಬಣ್ಣದ್ದಾಗಿರಬೇಕು. ಬ್ಯಾಗ್ ತಯಾರಿಸುವ ಮೂಲ ವಸ್ತು ಯಾವುದೇ ಪ್ರಿಂಟ್ ಹೊಂದಿರಬಾರದು.
9 x 12	28	
10 x 16	23	
13 x 19	45	

ದರಗಳನ್ನು ನಿರ್ದಿಷ್ಟ ಸ್ಥಳಕ್ಕೆ ಸಾಗಾಣಿಕೆ ವೆಚ್ಚ ಮತ್ತು ತೆರಿಗೆಗಳು ಸೇರಿದಂತೆ ನಮೂದಿಸುವುದು.

ANNEXURE-2

Prequalification Tenders to Short List Manufacturers/Agencies/Firms for Supply of Polythene Bags/Sheets, Woven Sacks and to Determine Rate Per Tonne of Polythene Bags/Sheets & 1000 Nos. of Woven Sacks.

2005-06ನೇ ಸಾಲಿಗೆ ಪಾಲಿಥೀನ್ ಚೀಲ / ಶೀಟ್ ಮತ್ತು ವೊವನ್ ಸ್ಯಾಕ್ಸ್‌ಗಳನ್ನು ಸರಬರಾಜು ಮಾಡಲು ಬೇಡಿಕೆ ಸಲ್ಲಿಸಬಹುದಾದ ಅರಣ್ಯ ವಿಭಾಗಗಳ ಹೆಸರು, ಕೇಂದ್ರ ಸ್ಥಾನ ಮತ್ತು ಬೇಡಿಕೆ ಸಲ್ಲಿಸುವ ಅಧಿಕಾರಿಯ ಪದನಾಮದ ವಿವರ.

ಕ್ರ. ಸಂ.	ಅರಣ್ಯ ವಿಭಾಗದ ಹೆಸರು	ಅರಣ್ಯ ವಿಭಾಗದ ಕೇಂದ್ರ ಸ್ಥಾನ	ಬೇಡಿಕೆ ಪತ್ರ ಸಲ್ಲಿಸುವ ಅಧಿಕಾರಿಗಳ ಪದನಾಮ
1	2	3	4
1	ಬಾಗಲಕೋಟೆ ಸಾಮಾಜಿಕ ಅರಣ್ಯ ವಿಭಾಗ	ಬಾಗಲಕೋಟೆ	ಉಪ ಅರಣ್ಯ ಸಂರಕ್ಷಣಾಧಿಕಾರಿಗಳು.
2	ಬಾಗಲಕೋಟೆ ಪ್ರಾದೇಶಿಕ ಅರಣ್ಯ ವಿಭಾಗ	ಬಾಗಲಕೋಟೆ	ಉಪ ಅರಣ್ಯ ಸಂರಕ್ಷಣಾಧಿಕಾರಿಗಳು.
3	ಬಂಡಿಪುರ ಹುಲಿಯೋಜನೆ ವಿಭಾಗ	ಬಂಡಿಪುರ	ಉಪ ಅರಣ್ಯ ಸಂರಕ್ಷಣಾಧಿಕಾರಿಗಳು.
4	ಅರಣ್ಯ ಕೃಷಿಕರು, ಕೇಂದ್ರವಲಯ	ದೊರೆಸಾನಿಪಾಳ್ಯ ಬೆಂಗಳೂರು	ಉಪ ಅರಣ್ಯ ಸಂರಕ್ಷಣಾಧಿಕಾರಿಗಳು.
5	ಬೆಂಗಳೂರು ಅರಣ್ಯ ಸಂಶೋಧನಾ ವಿಭಾಗ	ದೊರೆಸಾನಿಪಾಳ್ಯ ಬೆಂಗಳೂರು	ಉಪ ಅರಣ್ಯ ಸಂರಕ್ಷಣಾಧಿಕಾರಿಗಳು.
6	ಬೆಂಗಳೂರು ಪ್ರಾದೇಶಿಕ ಅರಣ್ಯ ಗ್ರಾಮಾಂತರ ವಿಭಾಗ	ಬೆಂಗಳೂರು	ಉಪ ಅರಣ್ಯ ಸಂರಕ್ಷಣಾಧಿಕಾರಿಗಳು.
7	ಬೆಂಗಳೂರು ಪ್ರಾದೇಶಿಕ ಅರಣ್ಯ ನಗರ ವಿಭಾಗ	ಬೆಂಗಳೂರು	ಉಪ ಅರಣ್ಯ ಸಂರಕ್ಷಣಾಧಿಕಾರಿಗಳು.
8	ಬೆಂಗಳೂರು ಸಾಮಾಜಿಕ ಅರಣ್ಯ ನಗರ ವಿಭಾಗ	ಬೆಂಗಳೂರು	ಉಪ ಅರಣ್ಯ ಸಂರಕ್ಷಣಾಧಿಕಾರಿಗಳು.
9	ಬೆಂಗಳೂರು ಸಾಮಾಜಿಕ ಅರಣ್ಯ ಗ್ರಾಮಾಂತರ ವಿಭಾಗ	ಬೆಂಗಳೂರು	ಉಪ ಅರಣ್ಯ ಸಂರಕ್ಷಣಾಧಿಕಾರಿಗಳು.
10	ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ	ಬೆಂಗಳೂರು	ಉಪ ಅರಣ್ಯ ಸಂರಕ್ಷಣಾಧಿಕಾರಿಗಳು.
11	ಬೆಳಗಾಂ ಪ್ರಾದೇಶಿಕ ಅರಣ್ಯ ವಿಭಾಗ	ಬೆಳಗಾಂ	ಉಪ ಅರಣ್ಯ ಸಂರಕ್ಷಣಾಧಿಕಾರಿಗಳು.
12	ಬೆಳಗಾಂ ಸಾಮಾಜಿಕ ಅರಣ್ಯ ವಿಭಾಗ	ಬೆಳಗಾಂ	ಉಪ ಅರಣ್ಯ ಸಂರಕ್ಷಣಾಧಿಕಾರಿಗಳು.
13	ಬಳ್ಳಾರಿ ಸಾಮಾಜಿಕ ಅರಣ್ಯ ವಿಭಾಗ	ಬಳ್ಳಾರಿ	ಉಪ ಅರಣ್ಯ ಸಂರಕ್ಷಣಾಧಿಕಾರಿಗಳು.
14	ಅರಣ್ಯ ಕೃಷಿಕರು	ಬಳ್ಳಾರಿ	ಉಪ ಅರಣ್ಯ ಸಂರಕ್ಷಣಾಧಿಕಾರಿಗಳು.
15	ಬಳ್ಳಾರಿ ಪ್ರಾದೇಶಿಕ ಅರಣ್ಯ ವಿಭಾಗ	ಬಳ್ಳಾರಿ	ಉಪ ಅರಣ್ಯ ಸಂರಕ್ಷಣಾಧಿಕಾರಿಗಳು.
16	ಭದ್ರಾವತಿ ಪ್ರಾದೇಶಿಕ ಅರಣ್ಯ ವಿಭಾಗ	ಭದ್ರಾವತಿ	ಉಪ ಅರಣ್ಯ ಸಂರಕ್ಷಣಾಧಿಕಾರಿಗಳು.
17	ಬೀದರ್ ಸಾಮಾಜಿಕ ಅರಣ್ಯ ವಿಭಾಗ	ಬೀದರ್	ಉಪ ಅರಣ್ಯ ಸಂರಕ್ಷಣಾಧಿಕಾರಿಗಳು.
18	ಬೀದರ್ ಪ್ರಾದೇಶಿಕ ಅರಣ್ಯ ವಿಭಾಗ	ಬೀದರ್	ಉಪ ಅರಣ್ಯ ಸಂರಕ್ಷಣಾಧಿಕಾರಿಗಳು.
19	ಬಿಜಾಪುರ ಸಾಮಾಜಿಕ ಅರಣ್ಯ ವಿಭಾಗ	ಬಿಜಾಪುರ	ಉಪ ಅರಣ್ಯ ಸಂರಕ್ಷಣಾಧಿಕಾರಿಗಳು.
20	ಬಿಜಾಪುರ ಪ್ರಾದೇಶಿಕ ಅರಣ್ಯ ವಿಭಾಗ	ಬಿಜಾಪುರ	ಉಪ ಅರಣ್ಯ ಸಂರಕ್ಷಣಾಧಿಕಾರಿಗಳು.
21	ಕಾವೇರಿ ವನ್ಯಜೀವಿ ವಿಭಾಗ	ಕನಕಪುರ	ಉಪ ಅರಣ್ಯ ಸಂರಕ್ಷಣಾಧಿಕಾರಿಗಳು.
22	ಚಾಮರಾಜನಗರ ವನ್ಯಜೀವಿ ವಿಭಾಗ	ಚಾಮರಾಜನಗರ	ಉಪ ಅರಣ್ಯ ಸಂರಕ್ಷಣಾಧಿಕಾರಿಗಳು.
23	ಚಾಮರಾಜನಗರ ಸಾಮಾಜಿಕ ಅರಣ್ಯ ವಿಭಾಗ	ಚಾಮರಾಜನಗರ	ಉಪ ಅರಣ್ಯ ಸಂರಕ್ಷಣಾಧಿಕಾರಿಗಳು.
24	ಚಿಕ್ಕಮಗಳೂರು ಸಾಮಾಜಿಕ ಅರಣ್ಯ ವಿಭಾಗ	ಚಿಕ್ಕಮಗಳೂರು	ಉಪ ಅರಣ್ಯ ಸಂರಕ್ಷಣಾಧಿಕಾರಿಗಳು.
25	ಚಿಕ್ಕಮಗಳೂರು ಪ್ರಾದೇಶಿಕ ಅರಣ್ಯ ವಿಭಾಗ	ಚಿಕ್ಕಮಗಳೂರು	ಉಪ ಅರಣ್ಯ ಸಂರಕ್ಷಣಾಧಿಕಾರಿಗಳು.
26	ಚಿಕ್ಕಮಗಳೂರು ಭದ್ರಾ ವನ್ಯಜೀವಿ ವಿಭಾಗ	ಚಿಕ್ಕಮಗಳೂರು	ಉಪ ಅರಣ್ಯ ಸಂರಕ್ಷಣಾಧಿಕಾರಿಗಳು.
27	ಚಿತ್ರದುರ್ಗ ಪ್ರಾದೇಶಿಕ ಅರಣ್ಯ ವಿಭಾಗ	ಚಿತ್ರದುರ್ಗ	ಉಪ ಅರಣ್ಯ ಸಂರಕ್ಷಣಾಧಿಕಾರಿಗಳು.
28	ಚಿತ್ರದುರ್ಗ ಸಾಮಾಜಿಕ ಅರಣ್ಯ ವಿಭಾಗ	ಚಿತ್ರದುರ್ಗ	ಉಪ ಅರಣ್ಯ ಸಂರಕ್ಷಣಾಧಿಕಾರಿಗಳು.
29	ದಾಂಡೇಲಿ ವನ್ಯಜೀವಿ ವಿಭಾಗ	ದಾಂಡೇಲಿ	ಉಪ ಅರಣ್ಯ ಸಂರಕ್ಷಣಾಧಿಕಾರಿಗಳು.
30	ದಾವಣಗೆರೆ ಸಾಮಾಜಿಕ ಅರಣ್ಯ ವಿಭಾಗ	ದಾವಣಗೆರೆ	ಉಪ ಅರಣ್ಯ ಸಂರಕ್ಷಣಾಧಿಕಾರಿಗಳು.
31	ದಾವಣಗೆರೆ ಪ್ರಾದೇಶಿಕ ಅರಣ್ಯ ವಿಭಾಗ	ದಾವಣಗೆರೆ	ಉಪ ಅರಣ್ಯ ಸಂರಕ್ಷಣಾಧಿಕಾರಿಗಳು.
32	ಧಾರವಾಡ ಸಾಮಾಜಿಕ ಅರಣ್ಯ ವಿಭಾಗ	ಧಾರವಾಡ	ಉಪ ಅರಣ್ಯ ಸಂರಕ್ಷಣಾಧಿಕಾರಿಗಳು.
33	ಧಾರವಾಡ ಪ್ರಾದೇಶಿಕ ಅರಣ್ಯ ವಿಭಾಗ	ಧಾರವಾಡ	ಉಪ ಅರಣ್ಯ ಸಂರಕ್ಷಣಾಧಿಕಾರಿಗಳು.
34	ಅರಣ್ಯ ಕೃಷಿಕರು	ಧಾರವಾಡ	ಉಪ ಅರಣ್ಯ ಸಂರಕ್ಷಣಾಧಿಕಾರಿಗಳು.

1	2	3	4
35	ಗದಗ ಸಾಮಾಜಿಕ ಅರಣ್ಯ ವಿಭಾಗ	ಗದಗ್	ಉಪ ಅರಣ್ಯ ಸಂರಕ್ಷಣಾಧಿಕಾರಿಗಳು.
36	ಗದಗ್ ಪ್ರಾದೇಶಿಕ ಅರಣ್ಯ ವಿಭಾಗ	ಗದಗ್	ಉಪ ಅರಣ್ಯ ಸಂರಕ್ಷಣಾಧಿಕಾರಿಗಳು.
37	ಘಟಪ್ರಭಾ ಪ್ರಾದೇಶಿಕ ಅರಣ್ಯ ವಿಭಾಗ	ಗೋಕಾಕ್	ಉಪ ಅರಣ್ಯ ಸಂರಕ್ಷಣಾಧಿಕಾರಿಗಳು.
38	ಗುಲ್ಬರ್ಗಾ ಸಾಮಾಜಿಕ ಅರಣ್ಯ ವಿಭಾಗ	ಗುಲ್ಬರ್ಗಾ	ಉಪ ಅರಣ್ಯ ಸಂರಕ್ಷಣಾಧಿಕಾರಿಗಳು.
39	ಗುಲ್ಬರ್ಗಾ ಪ್ರಾದೇಶಿಕ ಅರಣ್ಯ ವಿಭಾಗ	ಗುಲ್ಬರ್ಗಾ	ಉಪ ಅರಣ್ಯ ಸಂರಕ್ಷಣಾಧಿಕಾರಿಗಳು.
40	ಹಳಿಯಾಳ ಪ್ರಾದೇಶಿಕ ಅರಣ್ಯ ವಿಭಾಗ	ಹಳಿಯಾಳ	ಉಪ ಅರಣ್ಯ ಸಂರಕ್ಷಣಾಧಿಕಾರಿಗಳು.
41	ಹಾಸನ ಸಾಮಾಜಿಕ ಅರಣ್ಯ ವಿಭಾಗ	ಹಾಸನ	ಉಪ ಅರಣ್ಯ ಸಂರಕ್ಷಣಾಧಿಕಾರಿಗಳು.
42	ಹಾಸನ ಪ್ರಾದೇಶಿಕ ಅರಣ್ಯ ವಿಭಾಗ	ಹಾಸನ	ಉಪ ಅರಣ್ಯ ಸಂರಕ್ಷಣಾಧಿಕಾರಿಗಳು.
43	ಹಾವೇರಿ ಸಾಮಾಜಿಕ ಅರಣ್ಯ ವಿಭಾಗ	ಹಾವೇರಿ	ಉಪ ಅರಣ್ಯ ಸಂರಕ್ಷಣಾಧಿಕಾರಿಗಳು.
44	ಹಾವೇರಿ ಪ್ರಾದೇಶಿಕ ಅರಣ್ಯ ವಿಭಾಗ	ಹಾವೇರಿ	ಉಪ ಅರಣ್ಯ ಸಂರಕ್ಷಣಾಧಿಕಾರಿಗಳು.
45	ಹೊನ್ನಾವರ ಪ್ರಾದೇಶಿಕ ಅರಣ್ಯ ವಿಭಾಗ	ಹೊನ್ನಾವರ	ಉಪ ಅರಣ್ಯ ಸಂರಕ್ಷಣಾಧಿಕಾರಿಗಳು.
46	ಹುಣಸೂರು ಪ್ರಾದೇಶಿಕ ಅರಣ್ಯ ವಿಭಾಗ	ಹುಣಸೂರು	ಉಪ ಅರಣ್ಯ ಸಂರಕ್ಷಣಾಧಿಕಾರಿಗಳು.
47	ಹುಣಸೂರು ವನ್ಯಜೀವಿ ವಿಭಾಗ	ಹುಣಸೂರು	ಉಪ ಅರಣ್ಯ ಸಂರಕ್ಷಣಾಧಿಕಾರಿಗಳು.
48	ಕುದುರೆಮುಖ ವನ್ಯಜೀವಿ ವಿಭಾಗ	ಕಾರ್ಕಳ	ಉಪ ಅರಣ್ಯ ಸಂರಕ್ಷಣಾಧಿಕಾರಿಗಳು.
49	ಕಾರವಾರ ಸಾಮಾಜಿಕ ಅರಣ್ಯ ವಿಭಾಗ	ಕಾರವಾರ	ಉಪ ಅರಣ್ಯ ಸಂರಕ್ಷಣಾಧಿಕಾರಿಗಳು.
50	ಕಾರವಾರ ಪ್ರಾದೇಶಿಕ ಅರಣ್ಯ ವಿಭಾಗ	ಕಾರವಾರ	ಉಪ ಅರಣ್ಯ ಸಂರಕ್ಷಣಾಧಿಕಾರಿಗಳು.
51	ಕೋಲಾರ ಪ್ರಾದೇಶಿಕ ಅರಣ್ಯ ವಿಭಾಗ	ಕೋಲಾರ	ಉಪ ಅರಣ್ಯ ಸಂರಕ್ಷಣಾಧಿಕಾರಿಗಳು.
52	ಕೋಲಾರ ಸಾಮಾಜಿಕ ಅರಣ್ಯ ವಿಭಾಗ	ಕೋಲಾರ	ಉಪ ಅರಣ್ಯ ಸಂರಕ್ಷಣಾಧಿಕಾರಿಗಳು.
53	ಕೊಳ್ಳೇಗಾಲ ಪ್ರಾದೇಶಿಕ ಅರಣ್ಯ ವಿಭಾಗ	ಕೊಳ್ಳೇಗಾಲ	ಉಪ ಅರಣ್ಯ ಸಂರಕ್ಷಣಾಧಿಕಾರಿಗಳು.
54	ಕೊಪ್ಪ ಪ್ರಾದೇಶಿಕ ಅರಣ್ಯ ವಿಭಾಗ	ಕೊಪ್ಪ	ಉಪ ಅರಣ್ಯ ಸಂರಕ್ಷಣಾಧಿಕಾರಿಗಳು.
55	ಕೊಪ್ಪಳ್ ಸಾಮಾಜಿಕ ಅರಣ್ಯ ವಿಭಾಗ	ಕೊಪ್ಪಳ್	ಉಪ ಅರಣ್ಯ ಸಂರಕ್ಷಣಾಧಿಕಾರಿಗಳು.
56	ಕೊಪ್ಪಳ ಪ್ರಾದೇಶಿಕ ಅರಣ್ಯ ವಿಭಾಗ	ಕೊಪ್ಪಳ	ಉಪ ಅರಣ್ಯ ಸಂರಕ್ಷಣಾಧಿಕಾರಿಗಳು.
57	ಕುಂದಾಪುರ ಪ್ರಾದೇಶಿಕ ಅರಣ್ಯ ವಿಭಾಗ	ಕುಂದಾಪುರ	ಉಪ ಅರಣ್ಯ ಸಂರಕ್ಷಣಾಧಿಕಾರಿಗಳು.
58	ಮಡಿಕೇರಿ ಪ್ರಾದೇಶಿಕ ಅರಣ್ಯ ವಿಭಾಗ	ಮಡಿಕೇರಿ	ಉಪ ಅರಣ್ಯ ಸಂರಕ್ಷಣಾಧಿಕಾರಿಗಳು.
59	ಮಡಿಕೇರಿ ಸಾಮಾಜಿಕ ಅರಣ್ಯ ವಿಭಾಗ	ಮಡಿಕೇರಿ	ಉಪ ಅರಣ್ಯ ಸಂರಕ್ಷಣಾಧಿಕಾರಿಗಳು.
60	ಅರಣ್ಯ ಕೃಷಿಕರು	ಮಡಿಕೇರಿ	ಉಪ ಅರಣ್ಯ ಸಂರಕ್ಷಣಾಧಿಕಾರಿಗಳು.
61	ಮಂಡ್ಯ ಸಾಮಾಜಿಕ ಅರಣ್ಯ ವಿಭಾಗ	ಮಂಡ್ಯ	ಉಪ ಅರಣ್ಯ ಸಂರಕ್ಷಣಾಧಿಕಾರಿಗಳು.
62	ಮಂಡ್ಯ ಪ್ರಾದೇಶಿಕ ಅರಣ್ಯ ವಿಭಾಗ	ಮಂಡ್ಯ	ಉಪ ಅರಣ್ಯ ಸಂರಕ್ಷಣಾಧಿಕಾರಿಗಳು.
63	ಮಂಗಳೂರು ಸಾಮಾಜಿಕ ಅರಣ್ಯ ವಿಭಾಗ	ಮಂಗಳೂರು	ಉಪ ಅರಣ್ಯ ಸಂರಕ್ಷಣಾಧಿಕಾರಿಗಳು.
64	ಮಂಗಳೂರು ಪ್ರಾದೇಶಿಕ ಅರಣ್ಯ ವಿಭಾಗ	ಮಂಗಳೂರು	ಉಪ ಅರಣ್ಯ ಸಂರಕ್ಷಣಾಧಿಕಾರಿಗಳು.
65	ಮೈಸೂರು ಸಾಮಾಜಿಕ ಅರಣ್ಯ ವಿಭಾಗ	ಮೈಸೂರು	ಉಪ ಅರಣ್ಯ ಸಂರಕ್ಷಣಾಧಿಕಾರಿಗಳು.
66	ಮೈಸೂರು ಪ್ರಾದೇಶಿಕ ಅರಣ್ಯ ವಿಭಾಗ	ಮೈಸೂರು	ಉಪ ಅರಣ್ಯ ಸಂರಕ್ಷಣಾಧಿಕಾರಿಗಳು.
67	ರಾಯಚೂರು ಸಾಮಾಜಿಕ ಅರಣ್ಯ ವಿಭಾಗ	ರಾಯಚೂರು	ಉಪ ಅರಣ್ಯ ಸಂರಕ್ಷಣಾಧಿಕಾರಿಗಳು.
68	ರಾಯಚೂರು ಪ್ರಾದೇಶಿಕ ಅರಣ್ಯ ವಿಭಾಗ	ರಾಯಚೂರು	ಉಪ ಅರಣ್ಯ ಸಂರಕ್ಷಣಾಧಿಕಾರಿಗಳು.
69	ಸಾಗರ ಪ್ರಾದೇಶಿಕ ಅರಣ್ಯ ವಿಭಾಗ	ಸಾಗರ	ಉಪ ಅರಣ್ಯ ಸಂರಕ್ಷಣಾಧಿಕಾರಿಗಳು.
70	ಶಿವಮೊಗ್ಗ ಪ್ರಾದೇಶಿಕ ಅರಣ್ಯ ವಿಭಾಗ	ಶಿವಮೊಗ್ಗ	ಉಪ ಅರಣ್ಯ ಸಂರಕ್ಷಣಾಧಿಕಾರಿಗಳು.
71	ಶಿವಮೊಗ್ಗ ಸಾಮಾಜಿಕ ಅರಣ್ಯ ವಿಭಾಗ	ಶಿವಮೊಗ್ಗ	ಉಪ ಅರಣ್ಯ ಸಂರಕ್ಷಣಾಧಿಕಾರಿಗಳು.
72	ಶಿವಮೊಗ್ಗ ವನ್ಯಜೀವಿ ವಿಭಾಗ	ಶಿವಮೊಗ್ಗ	ಉಪ ಅರಣ್ಯ ಸಂರಕ್ಷಣಾಧಿಕಾರಿಗಳು.
73	ಶಿರಸಿ ಪ್ರಾದೇಶಿಕ ಅರಣ್ಯ ವಿಭಾಗ	ಶಿರಸಿ	ಉಪ ಅರಣ್ಯ ಸಂರಕ್ಷಣಾಧಿಕಾರಿಗಳು.
74	ತುಮಕೂರು ಸಾಮಾಜಿಕ ಅರಣ್ಯ ವಿಭಾಗ	ತುಮಕೂರು	ಉಪ ಅರಣ್ಯ ಸಂರಕ್ಷಣಾಧಿಕಾರಿಗಳು.
75	ತುಮಕೂರು ಪ್ರಾದೇಶಿಕ ಅರಣ್ಯ ವಿಭಾಗ	ತುಮಕೂರು	ಉಪ ಅರಣ್ಯ ಸಂರಕ್ಷಣಾಧಿಕಾರಿಗಳು.
76	ಉಡುಪಿ ಸಾಮಾಜಿಕ ಅರಣ್ಯ ವಿಭಾಗ	ಉಡುಪಿ	ಉಪ ಅರಣ್ಯ ಸಂರಕ್ಷಣಾಧಿಕಾರಿಗಳು.
77	ವಿರಾಜಪೇಟೆ ಪ್ರಾದೇಶಿಕ ಅರಣ್ಯ ವಿಭಾಗ	ವಿರಾಜಪೇಟೆ	ಉಪ ಅರಣ್ಯ ಸಂರಕ್ಷಣಾಧಿಕಾರಿಗಳು.
78	ಯಲ್ಲಾಪುರ ಪ್ರಾದೇಶಿಕ ಅರಣ್ಯ ವಿಭಾಗ	ಯಲ್ಲಾಪುರ	ಉಪ ಅರಣ್ಯ ಸಂರಕ್ಷಣಾಧಿಕಾರಿಗಳು.

2005-06ರ ಸಾಲಿನಲ್ಲಿ ಪಾಲಿಥೀನ್ ಚೀಲ/ಹಾಳೆ ಮತ್ತು ನೇಯ್ದ ಚೀಲಗಳನ್ನು ಸರಬರಾಜು ಮಾಡಲು ಅರ್ಹತಾ ಉತ್ಪಾದಕರು/ಏಜೆನ್ಸಿಗಳು/ಸಂಸ್ಥೆಗಳು ಆಸಕ್ತಿಯನ್ನು ವ್ಯಕ್ತಪಡಿಸುವ ಅರ್ಜಿ ನಮೂನೆ.

1.	ಸಂಚಕಾರ ಠೇವಣಿ ವಿವರಗಳು (ರೂ.ಗಳಲ್ಲಿ ಮೊತ್ತ, ಡಿ.ಡಿ.ಸಂಖ್ಯೆ, ದಿನಾಂಕ ಮತ್ತು ಬ್ಯಾಂಕಿನ ಹೆಸರು)	
2.	ಉದ್ದಿಮೆ/ಸಂಸ್ಥೆ/ಏಜೆನ್ಸಿಯ ನೋಂದಾಯಿತ ಹೆಸರು.	
3.	ನೋಂದಣಿಯ ವರ್ಷ ಮತ್ತು ನೋಂದಣಾತಿ ಪ್ರಾಧಿಕಾರಿ.	
4.	ನೋಂದಣಿ ಧೃಡಪತ್ರಿಕೆಯ ವಿವರಗಳು	
5.	ಉದ್ದಿಮೆ / ಸಂಸ್ಥೆ /ಏಜೆನ್ಸಿ ಕಛೇರಿಯ ಸಂಪೂರ್ಣ ಅಂಚೆ ವಿಳಾಸ, ದೂರವಾಣಿ/ ಫ್ಯಾಕ್ಸ್ ಸಂಖ್ಯೆ ಮತ್ತು ವಿದ್ಯೂನ್ಮಾನ ವಿಳಾಸ.	
6.	ಉತ್ಪಾದನಾ ಘಟಕದ ಸ್ಥಾಪಿಸಿರುವ ಸ್ಥಳ, ಸಂಪೂರ್ಣ ಅಂಚೆ ವಿಳಾಸ, ದೂರವಾಣಿ/ ಫ್ಯಾಕ್ಸ್ ಸಂಖ್ಯೆ	
7.	ಕರ್ನಾಟಕ ಮಾರಾಟ ಕರ ನೋಂದಣಿ ವಿವರಗಳು ಮತ್ತು ಯಾವ ವರ್ಷದವರೆಗೆ ಎಸೆಸ್‌ಮೆಂಟ್ ಆದೇಶವನ್ನು ಸಕ್ಷಮ ಪ್ರಾಧಿಕಾರದಿಂದ ನೀಡಲಾಗಿದೆ. (ತೆರಿಗೆ ತೀರುವಳಿ ಪ್ರಮಾಣ ಪತ್ರ ಲಗತ್ತಿಸುವುದು)	
8.	ಕೇಂದ್ರ ಮಾರಾಟ ಕರ ನೋಂದಣಿ ವಿವರಗಳು ಮತ್ತು ಯಾವ ವರ್ಷದವರೆಗೆ ಎಸೆಸ್‌ಮೆಂಟ್ ಆದೇಶವನ್ನು ಸಕ್ಷಮ ಪ್ರಾಧಿಕಾರದಿಂದ ನೀಡಲಾಗಿದೆ. (ತೆರಿಗೆ ತೀರುವಳಿ ಪ್ರಮಾಣ ಪತ್ರ ಲಗತ್ತಿಸುವುದು)	
9.	ಯಾವ ವರ್ಷದವರೆಗೆ ಆದಾಯ ಕರ ತೀರುವಳಿ ಮಾಡಲಾಗಿದೆ. (ತೆರಿಗೆ ತೀರುವಳಿ ಪ್ರಮಾಣ ಪತ್ರ ಲಗತ್ತಿಸುವುದು)	
10.	ಉದ್ದಿಮೆ/ಸಂಸ್ಥೆ/ಏಜೆನ್ಸಿಗಳು ಉತ್ಪಾದಿಸುವ ಉತ್ಪನ್ನಗಳ ವಿವರ ಮತ್ತು ತಾಂತ್ರಿಕ ಗುಣಮಟ್ಟಗಳ ತಪಶೀಲು (ತಾಂತ್ರಿಕ ಗುಣಮಟ್ಟಗಳ ತಪಶೀಲುಗಳ ವಿವರಗಳನ್ನು ಲಗತ್ತಿಸುವುದು)	
11.	ಉದ್ದಿಮೆ/ಸಂಸ್ಥೆ/ಏಜೆನ್ಸಿಯ ಸ್ಥಾಪಿತ ಸಾಮರ್ಥ್ಯ	
12.	ಉದ್ದಿಮೆ/ಸಂಸ್ಥೆ/ಏಜೆನ್ಸಿಯು ಅಳವಡಿಸಿಕೊಂಡಿರುವ ತಾಂತ್ರಿಕತೆ ವಿವರ	
13.	ಕಚ್ಚಾ ಸಾಮಗ್ರಿಯ ಮೂಲ ಮತ್ತು ಕಚ್ಚಾ ಸಾಮಗ್ರಿಯನ್ನು ಪಡೆಯಲು ಉದ್ದಿಮೆಯು ಹೊಂದಿರುವ ಈಗಿನ ವ್ಯವಸ್ಥೆ (ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸುವುದು)	
14.	ಉದ್ದಿಮೆ/ಸಂಸ್ಥೆ/ಏಜೆನ್ಸಿಯ ಅಧಿಕೃತ ಬ್ಯಾಂಕುಗಳು (ಧೃಡ ಪತ್ರಿಕೆಯನ್ನು ಲಗತ್ತಿಸುವುದು)	
15.	ಅಗತ್ಯವಿರುವ ಮೇಲಿನ ಸಾಮಗ್ರಿಗಳನ್ನು ಉದ್ದಿಮೆ / ಸಂಸ್ಥೆ / ಏಜೆನ್ಸಿಗಳಿಗೆ ಯಾವ ಯಾವ ಅರಣ್ಯ ವಿಭಾಗಗಳಿಗೆ ಪರಣಾಮಕಾರಿಯಾಗಿ ಮತ್ತು ವ್ಯಾವಹಾರಿಕವಾಗಿ ಒದಗಿಸಲು ಸಾಧ್ಯವೆನ್ನುವ ವಿವರಗಳು. ವಿಭಾಗಗಳ ಹೆಸರನ್ನು ನಮೂದಿಸಲು ಸ್ಥಳಾವಕಾಶ ಸಾಕಾಗದೇ ಇದ್ದಲ್ಲಿ ಪ್ರತ್ಯೇಕವಾಗಿ ಲಗತ್ತಿಸುವುದು.	
16.	ಉದ್ದಿಮೆ / ಸಂಸ್ಥೆ / ಏಜೆನ್ಸಿಯಲ್ಲಿನ ನೌಕರರ/ಕೆಲಸಗಾರರ ಸಂಖ್ಯಾ ಬಲ.	
17.	ಇಲಾಖೆಯೊಂದಿಗೆ ವ್ಯವಹರಿಸಲು ಅಧಿಕಾರ ನೀಡಲ್ಪಟ್ಟ ವ್ಯಕ್ತಿಯ ವಿವರ, ಅಂದರೆ ಪೂರ್ಣಹೆಸರು, ಅಂಚೆ ವಿಳಾಸ, ದೂರವಾಣಿ ಮತ್ತು ಫ್ಯಾಕ್ಸ್ ಸಂಖ್ಯೆ ಮತ್ತು ವಿದ್ಯುನ್ಮಾನ ಅಂಚೆ ಐಡಿ, ಮತ್ತು ಅಂತಹ ವ್ಯಕ್ತಿಯು ಉದ್ದಿಮೆ / ಸಂಸ್ಥೆ / ಏಜೆನ್ಸಿಯಲ್ಲಿ ಹೊಂದಿದ ಸ್ಥಾನಮಾನ.	
18.	ಉದ್ದಿಮೆ/ಸಂಸ್ಥೆ/ಏಜೆನ್ಸಿಗಳ ಕಳೆದ ಮೂರು ವರ್ಷಗಳಲ್ಲಿ ಮಾಡಿದ ಸರಬರಾಜು / ವ್ಯವಹಾರಗಳ ವಿವರಗಳು (ಇನ್‌ವಾಯಿಸ್‌ಗಳ ಪ್ರತಿ ಲಗತ್ತಿಸುವುದು)	

ನಾನು/ನಾವು ಈ ಮೂಲಕ ಧೃಡೀಕರಿಸುವುದೇನೆಂದರೆ ಮೇಲೆ ನೀಡಿದ ಮಾಹಿತಿಗಳು ವಾಸ್ತವ ಮತ್ತು ಸತ್ಯ, ಮತ್ತು ನಾನು/ನಾವು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳ ದಿನಾಂಕ 15.10.2005ರ ಪ್ರಕಟಣೆಯನ್ನು ಓದಿದ್ದೇನೆ/ವೆ ಮತ್ತು ವಿವಿಧ ಬದ್ಧತೆ ಮತ್ತು ಶರ್ತಗಳನ್ನು ತಿಳಿದುಕೊಂಡಿದ್ದೇನೆ/ವೆ.

ಸ್ಥಳ :

ದಿನಾಂಕ: 2005

ಅಧಿಕೃತ ವ್ಯಕ್ತಿಯ ಸಹಿ ಮತ್ತು ಮೊಹರು.

ಪಾಲಿಥೀನ್ ಚೀಲಗಳು/ಹಾಳೆಗಳು ಮತ್ತು ನೇಯ್ದ ಚೀಲಗಳನ್ನು ಸರಬರಾಜು ಮಾಡಲು ಅರ್ಹ ಉತ್ಪಾದಕರು/ಏಜೆನ್ಸಿ/ಸಂಸ್ಥೆಗಳ ಸಂಭಾವ್ಯ ಪಟ್ಟಿ ತಯಾರಿಸುವ ಬಗ್ಗೆ ಮತ್ತು ಪಾಲಿಥೀನ್ ಚೀಲಗಳು/ ಹಾಳೆಗಳಿಗೆ ಪ್ರತಿ ಟನ್‌ಗೆ ದರ ಮತ್ತು ನೇಯ್ದ ಚೀಲಗಳಿಗೆ ಪ್ರತಿ ಸಾವಿರ ಚೀಲಗಳಿಗೆ ದರ ನಿಷ್ಕರ್ಷಿಸುವ ಬಗ್ಗೆ ಅರ್ಹತಾ ಪೂರ್ವ ಟೆಂಡರು.

ಸಫಲ ದರ ಟೆಂಡರುದಾರರಿಗೆ ಕರಾರಿನ ಶರ್ತಗಳ ಪ್ರಮುಖ ಲಕ್ಷಣಗಳು.

1) 2005-06ರ ಅರಣ್ಯ ನರ್ಸರಿ ಋತುಮಾನದಲ್ಲಿ ಯಾವುದೇ ಅರಣ್ಯ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿಗಳಿಂದ ಬೇಡಿಕೆ ಪತ್ರ ಸ್ವೀಕೃತಿಯಾದ ಒಂದು ತಿಂಗಳನೊಳಗೆ ಸರಬರಾಜು ಮಾಡುವುದನ್ನು ಇನ್ನು ಮುಂದಕ್ಕೆ 'ಸರಬರಾಜುದಾರರು' ಎಂದು ಕರೆಯಲ್ಪಡುವ ಸಫಲ "ದರ ಟೆಂಡರುದಾರರು" ನಿಶ್ಚಿತಗೊಳಿಸತಕ್ಕದ್ದು.

2) 2005-06ರ ನರ್ಸರಿ ಋತುಮಾನ ಎಂದರೆ 16.11.2005 ರಿಂದ 31.3.2006ರ ಅಂತ್ಯದ ವರೆಗಿನ ಅವಧಿ.

3) ಸಂಭಂಧಪಟ್ಟ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು 2005-06ರ ನರ್ಸರಿ ಋತುಮಾನಕ್ಕೆ ಸಲ್ಲಿಸುವ ಬೇಡಿಕೆಯ ಪ್ರಮಾಣಕ್ಕೆ ಅನುಗುಣವಾಗಿ ಸರಬರಾಜನ್ನು ಮಾಡತಕ್ಕದ್ದು.

4) ಸರಬರಾಜು ಸರಕುಗಳನ್ನು ಕರಾರು ಪತ್ರಕ್ಕೆ ಅನುಬಂಧಿಸಿದ ಸಂಭಂಧಪಟ್ಟ ಅರಣ್ಯ ವಿಭಾಗಗಳ ಕೇಂದ್ರಸ್ಥಾನದಲ್ಲಿ ಸರಕನ್ನು ತಮ್ಮ ವೆಚ್ಚದಲ್ಲಿಯೇ ಸಾಗಿಸಿ ಸರಬರಾಜು ಮಾಡತಕ್ಕದ್ದು.

5) ಬೇಡಿಕೆ ಸಲ್ಲಿಸುವ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಮಾಡುವಂತಹ ತಪಾಸಣೆ/ತನಿಖೆ/ ವಿಚಾರಣೆಯಲ್ಲಿ ಸರಬರಾಜು ಮಾಡಿದ ಸರಕು ಕಳಪೆ ಗುಣಮಟ್ಟದ್ದೆಂದು ಕಂಡು ಬಂದರೆ, ಸರಬರಾಜು ಸ್ವೀಕೃತಿಯಾದ 15 ದಿನಗಳೊಳಗೆ ಸಂಪೂರ್ಣ ಅಥವಾ ಭಾಗಶಃ ಸರಬರಾಜಾದ ಸರಕನ್ನು ತಿರಸ್ಕರಿಸುವ ಹಕ್ಕನ್ನು ಆಯಾ ಉಪ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ಕಾಯ್ದಿರಿಸಲಾಗಿದೆ.

6) ಸರಬರಾಜುದಾರನು ಕರಾರು ಶರ್ತಗಳನ್ನು ಸಮರ್ಪಕವಾಗಿ ಈಡೇರಿಸುವ ಬಗ್ಗೆ ಭದ್ರತೆಯಾಗಿ ರೂ.3,00,000-00 (ರೂ.ಮೂರು ಲಕ್ಷ) ಮೌಲ್ಯದ ಫಿಡೆಲಿಟಿ ಬಾಂಡ್/ಬ್ಯಾಂಕ್ ಗ್ಯಾರೆಂಟಿಯನ್ನು ಹಾಜರು ಪಡಿಸುವ ಮೂಲಕ ನಷ್ಟ ಬಂಧಿ ಮಾಡಿಕೊಡತಕ್ಕದ್ದು.

7) ಫಿಡೆಲಿಟಿ ಬಾಂಡ್/ಬ್ಯಾಂಕ್ ಗ್ಯಾರೆಂಟಿಗಳು ಕರಾರುನಾಮೆಗೆ ಸಹಿ ಹಾಕಿದ ದಿನಾಂಕದಿಂದ ಎಪ್ರಿಲ್ 2006ರ ಅಂತ್ಯದವರೆಗೆ ಊರ್ಜಿತದಲ್ಲಿ ಇರತಕ್ಕದ್ದು ಮತ್ತು ಬೆಂಗಳೂರಿನ ಶಾಖೆ ಇರುವ ವಿಮಾ ಸಂಸ್ಥೆ/ರಾಷ್ಟ್ರೀಕೃತ ಬ್ಯಾಂಕುಗಳಿಂದ ನೀಡಿದ್ದಾಗಿರಬೇಕು.

8) ಯಾವುದೇ ಸಂಭಾವ್ಯ ಪಟ್ಟಿಯ ಸಫಲ ಟೆಂಡರು ಸರಬರಾಜುದಾರರು ಮೇಲಿನ ವೇಳಾ ಪಟ್ಟಿಗೆ ಬದ್ಧರಾಗಲು ವಿಫಲರಾದರೆ ಅಂತಹವರ ಫಿಡೆಲಿಟಿ ಬಾಂಡನ್ನು/ಬ್ಯಾಂಕ್ ಗ್ಯಾರೆಂಟಿಯನ್ನು ಮುಟ್ಟುಗೋಲು ಹಾಕಲಾಗುವುದು ಮತ್ತು ಮುಂದಿನ ಮೂರು ನರ್ಸರಿ ಋತುಮಾನಗಳಿಗೆ ಇಲಾಖೆಗೆ ಪಾಲಿಥೀನ್ ಚೀಲ/ಹಾಳೆ ಮತ್ತು ನೇಯ್ದ ಚೀಲಗಳ ಸರಬರಾಜಿನ ವಿಷಯದಲ್ಲಿ ಭಾಗಿಯಾಗಲು ಅನರ್ಹಗೊಳಿಸಲಾಗುವುದು.

9) ಸರಬರಾಜುಗಳು ಸ್ವೀಕೃತಿಯಾದ ತರುವಾಯ ಬೇಡಿಕೆ ನೀಡಿದ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಬಿಲ್ಲುಗಳ ಪಾವತಿಯ ಬಗ್ಗೆ ಕ್ರಮ ಕೈಗೊಳ್ಳುವರು. ಸರಕಾರದಿಂದ ಅನುದಾನ ಬಿಡುಗಡೆಯ ಶರ್ತಕ್ಕೆ ಒಳಪಟ್ಟು, ಬೇಡಿಕೆ ನೀಡಿದ ಸರಕನ್ನು ಸರಬರಾಜು ಮಾಡಿರುವುದರಿಂದ ಉದ್ಭವಿಸುವ ಬಿಲ್ಲುಗಳನ್ನು ಸರಕು ಸ್ವೀಕೃತಿಯಾದ 90 ದಿನಗಳೊಳಗೆ ಪಾವತಿಸಲಾಗುವುದು.

10) ಕರ್ನಾಟಕ ಅರಣ್ಯ ಇಲಾಖೆಯು ಯಾವುದೇ ಹಣಕಾಸು ಸಂಸ್ಥೆಗೆ/ಬ್ಯಾಂಕಿಗೆ, ಕಚ್ಚಾ ಮಾಲು ಸರಬರಾಜು ಮಾಡುವ ಏಜೆನ್ಸಿಗೆ, ವಿದ್ಯುತ್ ಸರಬರಾಜು ಮಾಡುವ ಪ್ರಾಧಿಕಾರಕ್ಕೆ, ಮಾಲಿನ ನಿಯಂತ್ರಣ ಮಂಡಳಿಗೆ, ನಗರ ಸಭೆಗಳಿಗೆ ಹೊಣೆಗಾರರಾಗುವುದಿಲ್ಲ. ಸಂಭಂಧಪಟ್ಟ ಸಂಘಟನೆಗಳಿಂದ ಅಡ್ಡಿ ನಿವಾರಣೆಯನ್ನು ಪಡೆಯುವುದು ಸಫಲ ದರ ಟೆಂಡರು ಉದ್ದಿಮೆ/ಸಂಸ್ಥೆ/ ಏಜೆನ್ಸಿಯ ಜವಾಬ್ದಾರಿಯಾಗಿರುತ್ತದೆ. ಮೇಲಿನ ಯಾವುದೇ ಉಲ್ಲಂಘನೆಯಿಂದ ಸರಬರಾಜು ಮಾಡಲು ಅಡ್ಡಿ ಆತಂಕ ಉಂಟಾದರೆ ಉದ್ದಿಮೆ/ಸಂಸ್ಥೆ/ಏಜೆನ್ಸಿಯು ವೇಳಾ ಪಟ್ಟಿಯ ಪ್ರಕಾರ ಸರಬರಾಜು ಮಾಡಲು ಅಸಾಧ್ಯವಾದ ಕಾರಣ ಮುಂದಿಡಲು ಬರಲಾರದು.

11) ಉದ್ದಿಮೆ/ಸಂಸ್ಥೆ/ಏಜೆನ್ಸಿಯು ಯಾವುದೇ ಸಾರ್ವಜನಿಕ ಅಥವಾ ಖಾಸಗಿ ಸಂಸ್ಥೆಯೊಂದಿಗೆ ಮಾಡಿಕೊಳ್ಳುವ, ಯಾವುದೇ ಆರ್ಥಿಕ ಅಥವಾ ಇತರ ರೀತಿಯ ಬದ್ಧತೆಗಳಿಗೆ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಸರಬರಾಜು ಬೇಡಿಕೆ ಆದೇಶವನ್ನು ಕರ್ನಾಟಕ ಅರಣ್ಯ ಇಲಾಖೆಯ ಅಧಿಕಾರ ಪತ್ರವೆಂದು ಪರಿಗಣಿಸತಕ್ಕದ್ದಲ್ಲ. ಅಂತಹ ವ್ಯವಹಾರಗಳು ಸಂಬಂಧಪಟ್ಟ ಉದ್ದಿಮೆ/ಸಂಸ್ಥೆ/ಏಜೆನ್ಸಿಗಳ ಸ್ವಂತ ಜವಾಬ್ದಾರಿಯಲ್ಲಿ (risk) ಆಗಿರುತ್ತದೆ.

12) ಯಾವುದೇ ವಿವಾದಗಳು ಉಂಟಾದಲ್ಲಿ ಯಾವ ವೃತ್ತ ವ್ಯಾಪ್ತಿಯ ವಿಭಾಗಕ್ಕೆ ಸರಬರಾಜು ಮಾಡಲಾಗಿದೆಯೊ ಅಂತಹ ವೃತ್ತದ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ಮೇಲ್ಮನವಿ ಸಲ್ಲಿಸಬಹುದು.

ಪಿ.ಆರ್.563 ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ.

ಕರ್ನಾಟಕ ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಟೆಂಡರ್ ಅವಧಿ ವಿಸ್ತರಣೆ

ಈ ಕಾರ್ಯಾಲಯದ ಟೆಂಡರ್ ಪ್ರಕಟಣೆ ಸಂ: ಸನಿವಿ/ ಬೆಳಗಾಂವಿ/ ಜೀ೪/ ಟೆಂಡರ್/ 05-06/ 2129, ದಿನಾಂಕ: 15.09.2005ಲ್ಲಿ ಆಹ್ವಾನಿಸಲಾದ ಟೆಂಡರಿನ ದಿನಾಂಕಗಳನ್ನು ಈ ಕೆಳಗಿನಂತೆ ಮುಂದೂಡಲಾಗಿದೆ.

ಕಾಮಗಾರಿಯ ಹೆಸರು ಬೆಳಗಾಂವಿ, ಜಿ: ರಾಮದುರ್ಗ ತಾಲ್ಲೂಕು: ಜಾಲಿಕಟ್ಟಿ ಗ್ರಾಮದ ಹತ್ತಿರ ಇಂಗು ಕೆರೆಯ ನಿರ್ಮಾಣ.

1. ಖುಲ್ಲಾ ಟೆಂಡರ್ ಫಾರ್ಮ್‌ಗಳನ್ನು ನೀಡುವ ದಿನಾಂಕ : 08.11.2005 ರಿಂದ 09.11.2005.
2. ಟೆಂಡರ್‌ಗಳನ್ನು ಸ್ವೀಕರಿಸುವ ದಿನಾಂಕ : 15.11.2005

ಆರ್. ನಾಗರಾಜ

ಪಿ.ಆರ್.564 ಕಾರ್ಯನಿರ್ವಾಹಕ ಇಂಜಿನೀಯರ್,
ಸಣ್ಣ ನೀರಾವರಿ ವಿಭಾಗ, ಬೆಳಗಾವಿ.

ಅರಣ್ಯ ಕೃಷಿಕರ ಕಛೇರಿ, ಕೇಂದ್ರವಲಯ, ದೊರೆಸಾನಿಪಾಳ್ಯ, ಅರಕೆರೆ ಮೈಕೋ ಲೇಔಟ್,
ಬನ್ನೇರುಘಟ್ಟ ರಸ್ತೆ, ಬೆಂಗಳೂರು-560 076
ಸಂಕ್ಷಿಪ್ತ ಟೆಂಡರ್ ಹಾಗೂ ಹರಾಜು ಪ್ರಕಟಣೆ
ಸಂಖ್ಯೆ:ಎ4.ಎಸ್ಎಎಸ್-ಹುಣಿಸೆ-ಗೋಡಂಬಿ-ಸಿಆರ್-12/ 2005-06, ದಿನಾಂಕ:7ನೇ ಅಕ್ಟೋಬರ್, 2005

ವಿಷಯ : ಅರಣ್ಯ ಕೃಷಿಕರು, ಕೇಂದ್ರ ವಲಯಕ್ಕೆ ಸಂಬಂಧಿಸಿದ ಸಂಶೋಧನಾ ವಲಯ ಬೆಂಗಳೂರು, ಹೊಸಕೋಟೆ ಮತ್ತು ಕೋಲಾರಕ್ಕೆ ಸಂಬಂಧಿಸಿದ ಹುಣಿಸೆ ಮತ್ತು ಸಿಟ್ರಿಡೋರ ಎಲೆ ಫಲೋತ್ಪನ್ನಗಳನ್ನು 2005-2007ನೇ ಸಾಲಿಗೆ ಟೆಂಡರ್ ಹಾಗೂ ಹರಾಜಿನ ಮೂಲಕ ವಿಲೇವಾರಿ ಮಾಡುವ ಬಗ್ಗೆ.

ಈ ಮೂಲಕ ಸಮಸ್ತ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ಈ ವಿಭಾಗಕ್ಕೆ ಸಂಬಂಧಿಸಿದ ಸಂಶೋಧನಾ ವಲಯಗಳಾದ ಹೊಸಕೋಟೆ, ಕೋಲಾರ ಮತ್ತು ಬೆಂಗಳೂರು ಸಂಶೋಧನಾ ಕೇಂದ್ರಗಳಲ್ಲಿನ ಹುಣಿಸೆ ಹಣ್ಣು ಮತ್ತು ಸಿಟ್ರಿಡೋರ ಎಲೆ ಫಸಲುಗಳನ್ನು 2005-2007ನೇ ಸಾಲಿಗೆ ಅಂದರೆ 01.12.2005 ರಿಂದ 31.08.2007ರ ಅವಧಿಗೆ ಅಥವಾ ಟೆಂಡರ್ ಹರಾಜು ಒಪ್ಪಿಗೆಯಾಗಿ ಕರಾರು ಮಾಡಿಕೊಂಡ ದಿನದಿಂದ ದಿನಾಂಕ: 31.08.2007ರವರೆಗೆ ಸಂಗ್ರಹಿಸುವ ಹಕ್ಕನ್ನು ಅರಣ್ಯ ಕೃಷಿಕರು, ಕೇಂದ್ರ ವಲಯ, ಬೆಂಗಳೂರು ಇವರು ಅಥವಾ ಇವರಿಂದ ಅಧಿಕಾರ ಪಡೆದ ಅಧಿಕಾರಿಗಳು ಈ ಕಛೇರಿಯ ವಿವರವುಳ್ಳ ಪ್ರಕಟಣೆಯಲ್ಲಿರುವ ಷರತ್ತುಗಳಿಗನುಗುಣವಾಗಿ ಕೆಳಗಿನ ತಖ್ತೆಲಿನಲ್ಲಿ ಸೂಚಿಸಿರುವ ಪ್ರಕಾರ ಟೆಂಡರು ಕಂ ಬಹಿರಂಗ ಹರಾಜಿನ ಮೂಲಕ ದಿನಾಂಕ: 16.11.2005ರಂದು ಮಾರಾಟ ಮಾಡುವರು. ಸದರಿ ದಿನಾಂಕದಂದು ಕಾರಣಾಂತರದಿಂದ ಟೆಂಡರ್ ಕಂ ಹರಾಜು ನಡೆಯದಿದ್ದರೆ, ಇದೇ ಪ್ರಕಟಣೆಯ ಷರತ್ತಿಗೆ ಒಳಪಟ್ಟು ದಿನಾಂಕ: 29.11.2005ರಂದು ಎರಡನೇ ಬಾರಿಗೆ ಮಾರಾಟ ಮಾಡುವರು. ಅರಣ್ಯ ಗುತ್ತಿಗೆದಾರರು ಭಾಗವಹಿಸಿ ಪಡೆಯಬಹುದು ಪ್ರಕಟಿಸಿರುವ ಅರಣ್ಯೋತ್ಪನ್ನವು ತಖ್ತೆಲಿನಲ್ಲಿ ಸೂಚಿಸಿರುವ ಸಂಶೋಧನಾ ಕೇಂದ್ರಗಳಿಗೆ ಮಾತ್ರ ಸಂಬಂಧಿಸಿರುತ್ತದೆ.

ತಖ್ತೆಲು

ಕ್ರಮ ಸಂಖ್ಯೆ	ಫಸಲು ರೂಢಿಸುವ ಪ್ರದೇಶ	ಮಾರಾಟ ಮಾಡುವ ಸ್ಥಳ	ಟೆಂಡರ್ ಸ್ವೀಕರಿಸುವ ದಿನಾಂಕ ವೇಳೆ	ಹರಾಜಿನ ದಿನಾಂಕ ವೇಳೆ	ಟೆಂಡರ್ ಫಾರಂ ಜೊತೆ ಲಗತ್ತಿಸಬೇಕಾದ ಠೇವಣಿ ಹರಾಜಿನ ಹಣ
1	2	3	4	5	6
2005-2007ನೇ ಸಾಲಿನ ಹುಣಸೆ ಫಸಲಿನ ಮಾರಾಟ					
1.	ಹೊಸಕೋಟೆ ಸಂಶೋಧನಾ ವಲಯದ ಗೊಟ್ಟಿಪುರ ಮತ್ತು ನಲ್ಲಾಳ್ ಸಂಶೋಧನಾ ಕೇಂದ್ರದಲ್ಲಿರುವ	ಅರಣ್ಯ ಕೃಷಿಕರು, ಕೇಂದ್ರವಲಯ, ದೊರೆಸಾನಿಪಾಳ್ಯ, ಅರಕೆರೆ ಮೈಕೋ ಲೇಔಟ್ ಬನ್ನೇರುಘಟ್ಟ ರಸ್ತೆ, ಬೆಂಗಳೂರು-76	ಹುಣಿಸೆ ಫಸಲಿನ ಮಾರಾಟ ದಿನಾಂಕ 16.11.2005ರಂದು ಮಧ್ಯಾಹ್ನ 3.00 ಗಂಟೆಯವರೆಗೆ	ದಿನಾಂಕ: 16.11.2005ರಂದು ಮಧ್ಯಾಹ್ನ 3.30 ಗಂಟೆಯಿಂದ	1) ಟೆಂಡರ್ ಫಾರಂ ಜೊತೆ ರೂ.5000-00 ಮೊಬಲಗಿನ ಯಾವುದಾದರೂ ರಾಷ್ಟ್ರೀಕೃತ ಬ್ಯಾಂಕ್‌ನಿಂದ ಪಡೆದ ಡಿ.ಡಿ. ಲಗತ್ತಿಸಿರಬೇಕು. 2) ಹರಾಜಿನಲ್ಲಿ ಭಾಗವಹಿಸುವವರು ರೂ.5000.00 ನಗದು ಹಣವನ್ನು ಹರಾಜು ಮುಂಚಿತವಾಗಿ ಪಾವತಿಸುವುದು.
2.	ಕೋಲಾರ ಸಂಶೋಧನಾ ವಲಯದ ಅ) ಯಶವಂತಪುರ 'ಎ' ಮತ್ತು 'ಬಿ' ಬ್ಲಾಕ್	ಅರಣ್ಯ ಕೃಷಿಕರು, ಕೇಂದ್ರ ವಲಯ, ದೊರೆಸಾನಿಪಾಳ್ಯ ಅರಕೆರೆ ಮೈಕೋ ಲೇಔಟ್, ಬನ್ನೇರುಘಟ್ಟ ರಸ್ತೆ, ಬೆಂಗಳೂರು-76	ಹುಣಿಸೆ ಫಸಲಿನ ಮಾರಾಟ ದಿನಾಂಕ: 16.11.2005ರಂದು ಮಧ್ಯಾಹ್ನ 3.00 ಗಂಟೆಯವರೆಗೆ	ದಿನಾಂಕ: 16.11.2005 ರಂದು ಮಧ್ಯಾಹ್ನ 3.30 ಗಂಟೆಯಿಂದ	1) ಟೆಂಡರ್ ಫಾರಂ ಜೊತೆ ರೂ.5000-00 ಮೊಬಲಗಿನ ಯಾವುದಾದರೂ ರಾಷ್ಟ್ರೀಕೃತ ಬ್ಯಾಂಕ್‌ನಿಂದ ಪಡೆದ ಡಿ.ಡಿ. ಲಗತ್ತಿಸಿರಬೇಕು. 2) ಹರಾಜಿನಲ್ಲಿ ಭಾಗವಹಿಸುವವರು ರೂ.5000.00 ನಗದು ಹಣವನ್ನು ಹರಾಜು ಮುಂಚಿತವಾಗಿ ಪಾವತಿಸುವುದು.
3.	ಬೆಂಗಳೂರು ಸಂಶೋಧನಾ ವಲಯದ ಅ) ಜಾರಕಬಂಡೆ ಸಂಶೋಧನಾ ಕೇಂದ್ರ 55 ಹುಣಿಸೆ ಮರಗಳು ಆ) ಸೂಲಿಕೆರೆ ಸಂಶೋಧನಾ ಕೇಂದ್ರ 80 ಹುಣಿಸೆ ಮರಗಳು. ಇ) ದೊರೆಸಾನಿಪಾಳ್ಯ ಸಂಶೋಧನಾ ಕೇಂದ್ರ 15 ಹುಣಿಸೆ ಮರಗಳು	ಅರಣ್ಯ ಕೃಷಿಕರು, ಕೇಂದ್ರ ವಲಯ, ದೊರೆಸಾನಿಪಾಳ್ಯ ಅರಕೆರೆ ಮೈಕೋ ಲೇಔಟ್, ಬನ್ನೇರುಘಟ್ಟ ರಸ್ತೆ, ಬೆಂಗಳೂರು-76	ಹುಣಿಸೆ ಫಸಲಿನ ಮಾರಾಟ ದಿನಾಂಕ: 16.11.2005ರಂದು ಮಧ್ಯಾಹ್ನ 3.00 ಗಂಟೆಯವರೆಗೆ	ದಿನಾಂಕ: 16.11.2005 ರಂದು ಮಧ್ಯಾಹ್ನ 3.30 ಗಂಟೆಯಿಂದ	1) ಟೆಂಡರ್ ಫಾರಂ ಜೊತೆ ರೂ.3000-00 ಮೊಬಲಗಿನ ಯಾವುದಾದರೂ ರಾಷ್ಟ್ರೀಕೃತ ಬ್ಯಾಂಕ್‌ನಿಂದ ಪಡೆದ ಡಿ.ಡಿ. ಲಗತ್ತಿಸಿರಬೇಕು. 2) ಹರಾಜಿನಲ್ಲಿ ಭಾಗವಹಿಸುವವರು ರೂ.2000.00 ನಗದು ಹಣವನ್ನು ಹರಾಜು ಮುಂಚಿತವಾಗಿ ಪಾವತಿಸುವುದು.

1	2	3	4	5	6
2005-2007ನೇ ಸಾಲಿನ ಸಿಟ್ರಿಡೋರ ಎಲೆ ಸಂಗ್ರಹಣೆಯ ಮಾರಾಟ					
4.	ಬೆಂಗಳೂರು ಸಂಶೋಧನಾ ವಲಯದ ಅ) ಜಾರಕಬಂಡೆ ಸಂಶೋಧನಾ ಕೇಂದ್ರ ಆ) ಕಲ್ಕೆರೆ ಸಂಶೋಧನಾ ಕೇಂದ್ರ ಇ) ದೊರೆಸಾನಿಪಾಳ್ಯ ಸಂಶೋಧನಾ ಕೇಂದ್ರ.	ಅರಣ್ಯ ಕೃಷಿಕರು, ಕೇಂದ್ರ ವಲಯ, ದೊರೆಸಾನಿಪಾಳ್ಯ ಅರಕೆರೆ ಮೈಕೋ ಲೇಔಟ್, ಬನ್ನೇರುಘಟ್ಟ ರಸ್ತೆ, ಬೆಂಗಳೂರು-76	ಸಿಟ್ರಿಡೋರ ಎಲೆ ಸಂಗ್ರಹಣೆ ಮಾರಾಟ ದಿನಾಂಕ: 16.11.2005 ರಂದು ಮಧ್ಯಾಹ್ನ 3.00 ಗಂಟೆಯವರೆಗೆ	ದಿನಾಂಕ: 16.11.2005ರಂದು ಮಧ್ಯಾಹ್ನ 3.30 ಗಂಟೆಯಿಂದ	1) ಟೆಂಡರ್ ಫಾರಂ ಜೊತೆ ರೂ.3000-00 ಮೊಬಲಗಿನ ಯಾವುದಾದರೂ ರಾಷ್ಟ್ರೀಕೃತ ಬ್ಯಾಂಕ್‌ನಿಂದ ಪಡೆದ ಡಿ.ಡಿ. ಲಗತ್ತಿಸಿರಬೇಕು. 2) ಹರಾಜಿನಲ್ಲಿ ಭಾಗವಹಿಸುವವರು ರೂ.2000.00 ನಗದು ಹಣವನ್ನು ಹರಾಜು ಮುಂಚಿತವಾಗಿ ಪಾವತಿಸುವುದು.

ಹೆಚ್ಚಿನ ಮಾಹಿತಿಯನ್ನು ಕಛೇರಿ ಕೆಲಸದ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದು.

ಷರತ್ತುಗಳು

1. ತಪ್ಶೀಲಿನಲ್ಲಿ ಕಾಣಿಸಿರುವ ಫಸಲನ್ನು ದಿನಾಂಕ: 31.08.2007ರವರೆಗೆ ಸಂಗ್ರಹಿಸುವ ಹಕ್ಕನ್ನು ಗುತ್ತಿಗೆದಾರರು ಪಡೆದಿರುತ್ತಾರೆ. 2005-2006ನೇ ಸಾಲಿಗೆ ಈ ವಿಭಾಗದಲ್ಲಿ ನೊಂದಾಯಿತ ಗುತ್ತಿಗೆದಾರರು ಮಾತ್ರ ಮೇಲಿನ ಟೆಂಡರ್ ಕಂ ಹರಾಜಿನಲ್ಲಿ ಭಾಗವಹಿಸಲು ಅರ್ಹರಿರುತ್ತಾರೆ.

2. ಆಸಕ್ತ ಟೆಂಡರ್‌ದಾರರು ರೂ.50.00 ಮತ್ತು ಇತರೇ ತೆರಿಗೆಗಳನ್ನು ಸಂದಾಯ ಮಾಡಿ ದಿನಾಂಕ: 16.11.2005ರ ಮಧ್ಯಾಹ್ನ 1.30 ಗಂಟೆಯವರೆಗೆ ಅರಣ್ಯ ಕೃಷಿಕರು, ಕೇಂದ್ರ ವಲಯ, ದೊರೆಸಾನಿಪಾಳ್ಯ ಅರಕೆರೆ ಮೈಕೋ ಲೇಔಟ್ ರಸ್ತೆ, ಬೆಂಗಳೂರು-560 076 ಇವರ ಕಛೇರಿಯಿಂದ ಟೆಂಡರ್ ಫಾರಂನ್ನು ಕಛೇರಿ ವೇಳೆಯಲ್ಲಿ ಪಡೆಯಬಹುದು.

3. ಹಿಂದಿನ ಹರಾಜಿನಲ್ಲಿ ಅಥವಾ ಟೆಂಡರ್‌ನಲ್ಲಿ ವಿಜೇತರಾಗಿ ಪಡೆದ ಫಸಲಿನ ಬಾಬ್ತು ಬಾಕಿ ಹೊಂದಿರುವ ಅರಣ್ಯ ಗುತ್ತಿಗೆದಾರರಿಗೆ ಟೆಂಡರ್ ಕಂ ಹರಾಜಿನಲ್ಲಿ ಭಾಗವಹಿಸಲು ಅವಕಾಶವಿರುವುದಿಲ್ಲ.

4. ದಿನಾಂಕ: 16.11.2005ರಂದು ಮಧ್ಯಾಹ್ನ 3.00 ಗಂಟೆಯವರೆಗೆ ಟೆಂಡರ್ ಫಾರಂಗಳನ್ನು ಈ ಕಛೇರಿಯಲ್ಲಿ ಪ್ರತ್ಯೇಕವಾಗಿ ನಿಗದಿಪಡಿಸಿದ ಟೆಂಡರ್ ಪೆಟ್ಟಿಗೆಯಲ್ಲಿ ಹಾಕತಕ್ಕದ್ದು, ಹಾಗೂ ಅದೇ ದಿನ ಮಧ್ಯಾಹ್ನ 3.30 ಗಂಟೆಯ ನಂತರ ಟೆಂಡರ್ ಫಾರಂಗಳನ್ನು ಹರಾಜು ಮುಗಿದ ಕೂಡಲೇ ತೆಗೆಯಲಾಗುವುದು.

5. ಕ್ಲೋನಲ್ ಆರ್ಚರ್ಡ್ಸ್ ಮತ್ತು ಸೀಡ್ಲಿಂಗ್ ಸೀಡ್ ಆರ್ಚರ್ಡ್ಸ್‌ಗಳ ಪಟ್ಟಿಯನ್ನು ಈ ಕಛೇರಿಯಿಂದ ಪಡೆಯಬೇಕು.

6. ಕ್ಲೋನಲ್ ಆರ್ಚರ್ಡ್ಸ್ ಮತ್ತು ಸೀಡ್ಲಿಂಗ್ ಸೀಡ್ ಆರ್ಚಡ್ಸ್‌ಗಳಲ್ಲಿ ಸಂಗ್ರಹಿಸಿದ ಹಣ್ಣಿನ ಬೀಜಗಳನ್ನು ಇಲಾಖಾ ಸಿಬ್ಬಂದಿಯ ಉಸ್ತುವಾರಿಯಲ್ಲಿ ಸಂಗ್ರಹಿಸಿ ಇಲಾಖೆಗೆ ಕೊಡತಕ್ಕದ್ದು.

7. ಯಶಸ್ವಿ ಬಿಡ್: ಟೆಂಡರ್‌ದಾರರು ಸಾಲ್ವೆನ್ಸಿ ಸರ್ಟಿಫಿಕೇಟ್‌ನ್ನು ಹರಾಜಿನ ದಿನ ಸಲ್ಲಿಸಿದಲ್ಲಿ ಮಾತ್ರ ಶೇಕಡಾ 25 ಭಾಗ ಹಣವನ್ನು ಅನ್ವಯಿಸುವ ತೆರಿಗೆಗಳೊಂದಿಗೆ ಅಂದೇ ಪಾವತಿಸತಕ್ಕದ್ದು ಒಂದು ವೇಳೆ ಸಾಲ್ವೆನ್ಸಿ ಸರ್ಟಿಫಿಕೇಟನ್ನು ಸಲ್ಲಿಸದಿದ್ದಲ್ಲಿ ಟೆಂಡರ್: ಹರಾಜು ಮುಗಿದ ಕೂಡಲೇ ಹರಾಜು: ಟೆಂಡರ್ ಪೂರ್ಣ ಹಣದೊಂದಿಗೆ ಚಾಲ್ತಿಯಲ್ಲಿರುವ ತೆರಿಗೆಗಳನ್ನು ಪೂರ್ಣವಾಗಿ ಪಾವತಿಸತಕ್ಕದ್ದು ತಪ್ಪಿದಲ್ಲಿ ಅಂತಹವರ ಇ.ಎಂ.ಡಿ. ಹಣವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಹರಾಜು ಟೆಂಡರ್ ನಿಯಮದಂತೆ ಕ್ರಮ ತೆಗೆದುಕೊಳ್ಳಲಾಗುವುದು.

8. ಮೇಲ್ಕಂಡ ಟೆಂಡರ್: ಹರಾಜಿನಲ್ಲಿ ಭಾಗವಹಿಸುವ ಮುನ್ನ ಅರಣ್ಯ ಗುತ್ತಿಗೆದಾರರು ಆಯಾಯ ಸಂಶೋಧನಾ ವಲಯ ಅರಣ್ಯಾಧಿಕಾರಿಯವರನ್ನು ಸಂಪರ್ಕಿಸಿ ಸಂಶೋಧನಾ ಕೇಂದ್ರ ಪ್ರದೇಶದಲ್ಲಿರುವ ಹುಣಿಸೆ ಮತ್ತು ಸಿಟ್ರಿಡೋರ ಎಲೆ ಬೆಳೆಯ ಬಗ್ಗೆ ನೋಡಲು ಅನುಮತಿ ಪಡೆದು ಫಸಲನ್ನು ಪರಿಶೀಲಿಸಿಕೊಳ್ಳಬಹುದು.

9. ಟೆಂಡರ್ ಕಂ ಹರಾಜಿನಲ್ಲಿ ಒಪ್ಪಿಗೆಯಾದ ಟೆಂಡರ್ ಹರಾಜಿನ ಅರಣ್ಯ ಗುತ್ತಿಗೆದಾರರಿಗೆ ಸದರಿ ಪ್ರದೇಶದ ಬೆಳೆಯನ್ನು ತೆಗೆಯಲು ಟೆಂಡರ್: ಹರಾಜು ಸಂಬಂಧಿಸಿದ ಅಧಿಕಾರಿಗಳಿಂದ ದೃಢೀಕೃತವಾದ ನಂತರ ಹಾಗೂ ಸದರಿ ಗುತ್ತಿಗೆದಾರರು 200.00 ರೂಪಾಯಿಯ ಛಾಪಾ ಕಾಗದದ ಮೇಲೆ ಅರಣ್ಯ ಕೃಷಿಕರು, ಕೇಂದ್ರ ವಲಯ, ಬೆಂಗಳೂರು ಇವರೊಂದಿಗೆ ಕರಾರು ಮಾಡಿಕೊಂಡ ಮೇಲೆ ಅನುಮತಿ ನೀಡಲಾಗುವುದು.

10. ಪ್ರತಿ ಸಂಶೋಧನಾ ವಲಯಕ್ಕೆ ಬೇರೆ ಬೇರೆ ಟೆಂಡರ್ ಫಾರಂನ್ನು ನಿಗದಿತ ಇ.ಎಂ.ಡಿ. ಯೊಂದಿಗೆ ಲಗತ್ತಿಸಿ ಸಲ್ಲಿಸಬೇಕು.

11. ಈ ಹರಾಜಿನ ಟೆಂಡರ್‌ಗಳನ್ನಾಗಲೀ, ಹರಾಜನ್ನಾಗಲೀ, ಯಾವುದೇ ಕಾರಣ ನೀಡದೆ ತಿರಸ್ಕರಿಸುವ ಪೂರ್ಣ ಅಧಿಕಾರವನ್ನು ಅರಣ್ಯ ಕೃಷಿಕರು, ಕೇಂದ್ರ ವಲಯ, ಬೆಂಗಳೂರು ರವರು ಪಡೆದಿರುತ್ತಾರೆ.

12. ರೂ. 7500.00 ಗಳಿಗಿಂತ ಹೆಚ್ಚಿಗೆ ಇದ್ದ ಪಕ್ಷದಲ್ಲಿ ಟೆಂಡರ್‌ದಾರರು ಫಾರಂ ಮೇಲೆ ಆದಾಯಕರ ಇಲಾಖೆಯವರಿಂದ ಪಡೆದ ಕ್ಲಿಯರೆನ್ಸ್ ಪತ್ರಗಳನ್ನು ಲಗತ್ತಿಸಬೇಕು ಅಥವಾ ಒಪ್ಪಂದದ ಸಮಯದಲ್ಲಿ ಸಲ್ಲಿಸತಕ್ಕದ್ದು.

13. ಟೆಂಡರ್ ಕಂ ಹರಾಜಿಗೆ ಸಂಬಂಧಿಸಿದ ಇತರ ಮಾಹಿತಿಗಳನ್ನು ಈ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಸಂಪರ್ಕಿಸಿ ವಿಚಾರಿಸಿ ಕೇಳಿ ತಿಳಿದುಕೊಳ್ಳಬಹುದು.

14. ಟೆಂಡರ್: ಹರಾಜಿನಲ್ಲಿ ಸಫಲರಾದ ಗುತ್ತಿಗೆದಾರರು ಸೂರ್ಯೋದಯ ನಂತರ ಮತ್ತು ಸೂರ್ಯಾಸ್ತಮಾನದ ಮೊದಲು ಫಸಲನ್ನು ಸಂಗ್ರಹಿಸಬೇಕು.

15. ಫಸಲನ್ನು ಸಂಗ್ರಹಿಸುವಾಗ ಇತರ ಅರಣ್ಯ ಉತ್ಪನ್ನ, ಸಸಿ ಮರಗಳಿಗೆ ಯಾವುದೇ ಹಾನಿಯಾಗದಂತೆ ಸಂಗ್ರಹಿಸುವುದು. ಹಾನಿಯುಂಟಾದ ಸಂದರ್ಭದಲ್ಲಿ ಅಂತಹ ಹಾನಿಯನ್ನು ಸಂಬಂಧಪಟ್ಟ ಗುತ್ತಿಗೆದಾರರಿಂದ ವಸೂಲು ಮಾಡಲಾಗುವುದು.

ಅರಣ್ಯ ಕೃಷಿಕರು
ಕೇಂದ್ರ ವಲಯ, ಬೆಂಗಳೂರು.

ಪಿ.ಆರ್.575

ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ, ಚಿಕ್ಕಮಗಳೂರು ವೃತ್ತ, ಚಿಕ್ಕಮಗಳೂರು

ಅಧಿಸೂಚನೆ

ಸಂಖ್ಯೆ:ಎ9/ ಹರಾಜು/ ಸಿಆರ್-1/ 2003-04, ದಿನಾಂಕ:23ನೇ ಸೆಪ್ಟೆಂಬರ್, 2005

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ನಮೂದಿಸಿದ ನಾಟಾ ಸಂಗ್ರಹಾಲಯಗಳಲ್ಲಿ ಲಭ್ಯವಿರುವ ಬೀಟೆ ಸಾಗುವಾನಿ ಇತರೆ ಜಾತಿಯ ನಾಟಾ ಹಾಗೂ ಸೌದೆಗಳನ್ನು ಡಿಪೋವಿನ ಮುಂದೆ ಸೂಚಿಸಿದ ದಿನಾಂಕದಂದು ಬಹಿರಂಗ ಹರಾಜು ಮಾರಾಟದಲ್ಲಿ ವಿಕ್ರಹಿಸಲು ಸಾಮಾನ್ಯ ಅವಗಾಹನೆಗಾಗಿ ಪ್ರಕಟಿಸಿದೆ.

ಕ್ರ. ಸಂ.	ವಿಭಾಗದ ಮತ್ತು ಡಿಪೋದ ಹೆಸರು	ಹರಾಜು ದಿನಾಂಕ	ಹರಾಜಿಗಿಟ್ಟ ನಾಟಾ ಸೌದೆಯ ಅಂದಾಜು ಪ್ರಮಾಣ (ಘ.ಮೀ.ಗಳಲ್ಲಿ)						
			ಬೀಟೆ	ಸಾಗುವಾನಿ	ಕಾಡು ಜಾತಿ	ಇತರೆ ಜಾತಿಯ ನಾಟ	ಬಿಲೆಟ್ಸ್	ಸೌದೆ	ಪೋಲ್ಸ್ (ಸಂಖ್ಯೆ)
1	2	3	4	5	6	7	8	9	10
I a)	**ಚಿಕ್ಕಮಗಳೂರು ವಿಭಾಗ:** ಕಡೂರು ಸರ್ಕಾರಿ ನಾಟಾ ಸಂಗ್ರಹಾಲಯ	05.11.05 06.11.05 (ಪೂರ್ವಾಹ್ನ)	387.000	1.000	-	2.000 (ನಂದಿ) 24.000 (ಇತರೆ ಜಾತಿ) 2.000 (ಅಕೇಶಿಯಾ)	-	50.000 (ಬೀಟೆಜಾತಿ) 47.000 (ಅಕೇಶಿಯಾ)	140 (ಸಾಗುವಾನಿ) 87 (ಅಕೇಶಿಯಾ)
b)	ಚಿಕ್ಕಮಗಳೂರು ಸರ್ಕಾರಿ ನಾಟಾ ಸಂಗ್ರಹಾಲಯ	06.11.05 (ಅಪರಾಹ್ನ)	0.524	0.357	-	35.071 (ಇತರೆ ಜಾತಿ)	0.506 (ಕಾಡು ಜಾತಿ ಸೈಜು)	6.000 (ಸಾಗುವಾನಿ) 9.700 (ಕಾಡುಜಾತಿ)	50 (ಅಕೇಶಿಯಾ)
II a)	**ಕೊಪ್ಪ ವಿಭಾಗ:** ನರಸಿಂಹರಾಜಪುರ ಸರ್ಕಾರಿ ನಾಟಾ ಸಂಗ್ರಹಾಲಯ	07.11.05 08.11.05	38.000 (ಸರ್ಕಾರಿ) 65.000 (ಖಾಸಗಿ)	6.000	-	59.000 (ನಂದಿ) 40.500 (ಮತ್ತಿ) 275.835 (ಜಂಬೆ) 6.000 (ಹೊನ್ನೆ) 267.999 (ಅಕೇಶಿಯಾ) 209.000 (ಇತರೆ ಜಾತಿ) 100.000 (ಹುನಾಲು)	-	60.000 (ಬೀಟೆ) 50.000 (ಕಾಡು ಜಾತಿ)	1500 (ಸಾಗುವಾನಿ) 2800 (ಅಕೇಶಿಯಾ)
b)	ಸಂಗಮೇಶ್ವರಪೇಟೆ ನಾಟಾ ಸಂಗ್ರಹಾಲಯ	09.11.05 10.11.05	71.000 (ಸರ್ಕಾರಿ) 42.000 (ಖಾಸಗಿ)	4.500		137.000 (ಮತ್ತಿ) 34.000 (ಹೊನ್ನೆ) 38.000 (ನಂದಿ) 37.000 (ಹೆಬ್ಬಲಸು) 243.000 (ಅಕೇಶಿಯಾ) 295.000 (ಇತರೆ ಜಾತಿ)	3.000 (ಬೀಟೆ) 60.000 (ಅಕೇಶಿಯಾ)	30.000 (ಅಕೇಶಿಯಾ)	12500 (ಸಾಗುವಾನಿ) 150 (ಅಕೇಶಿಯಾ) 300 (ಸಾಗುವಾನಿ ಬಳ್ಳಿಗಳು)

ಅರಣ್ಯ ಸಂರಕ್ಷಣಾಧಿಕಾರಿ,

ಪಿ.ಆರ್.576 ಚಿಕ್ಕಮಗಳೂರು ವೃತ್ತ, ಚಿಕ್ಕಮಗಳೂರು.

FORM-IV
(See Rule 12)
NOTICE

IT IS HEREBY NOTIFY THAT THE UNDERSIGNED HAS CHANGED HIS NAME FROM **DAYAMAPPA LACHAMAPPA MADAR** TO **DYAMAPPA LACHAMAPPA KENGAL.**

PD-104 **DYAMAPPA LACHAMAPPA KENGAL.**

ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ, ಕಾರ್ಯಯೋಜನೆ ಮತ್ತು ಮೋಜಣಿ, ಶಿವಮೊಗ್ಗ
ಸಂಕ್ಷಿಪ್ತ ಮರು ಟೆಂಡರ್ ಪ್ರಕಟಣೆ
ಸಂಖ್ಯೆ:ಎ2.ಬಿಯುಡಿ. ಕಲ್ಲುಕಂಬ. ಟೆಂಡರ್. ಸಿಆರ್. 12/ 2005-06, ದಿನಾಂಕ: 15ನೇ ಅಕ್ಟೋಬರ್, 2005

ವಿಷಯ : 2005-06ನೇ ಸಾಲಿಗೆ ಸಾಗರ ವಿಭಾಗದಲ್ಲಿ ಮೋಜಣಿ ಮಾಡಿದ ಪ್ರದೇಶಗಳ ಸೀಮಾರೇಖೆ ಉದ್ದಕ್ಕೂ ನೆಡಲು ಬೇಕಾದ ಕಲ್ಲು ಕಂಬ ಚಪ್ಪಡಿಗಳನ್ನು ಸರಬರಾಜು ಮಾಡಿ ನೆಡಲು ಹಾಗೂ (ಕೈರಾನ್ಸ್) ಕಲ್ಲು ಗುಪ್ಪೆಗಳನ್ನು ನಿರ್ಮಿಸಲು ಮರು ಟೆಂಡರ್ ಕುರಿತು.

ಸಾಗರ ವಿಭಾಗದಲ್ಲಿ ಎಸ್.ಎಫ್. ಮತ್ತು ಎಂ.ಎಫ್. ಪ್ರದೇಶಗಳ ಸೀಮಾರೇಖೆಗಳಲ್ಲಿ ಉತ್ತಮ ಗುಣಮಟ್ಟದ ಸುಟ್ಟ (ಸಿಂಗಲ್ ಲೈನ್ ಡ್ರೆಸ್ಡ್ ಗ್ರಾನೈಟ್ ಕಲ್ಲು) ಚೆನ್ನಾಗಿ ಕೆತ್ತಿದ 145 ಸೆಂ.ಮೀ. ಎತ್ತರ, 20 ಸೆಂ.ಮೀ. ಅಗಲ ಹಾಗೂ 15 ಸೆಂ.ಮೀ. ದಪ್ಪ ಹಾಗೂ ಅರ್ಧಚಂದ್ರ ವರ್ತುಲಾಕಾರದ ಕಲ್ಲು ಕಂಬಗಳನ್ನು ಸರಬರಾಜು ಹಾಗೂ 60 ಸೆಂ.ಮೀ. 20 ಸೆಂ.ಮೀ, 25 ಸೆಂ.ಮೀ, ಆಳತೆಯ ಗುಂಡಿಗಳನ್ನು ತೋಡಿ, ಸದರಿ ಕಲ್ಲು ಕಂಬಗಳನ್ನು ನೆಡಲು ಈ ಕೆಳಗಿನ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಪ್ರಮಾಣವನ್ನು ಸರಬರಾಜು ಮಾಡಿ ನೆಡಲು ಹಾಗೂ ಸೀಮಾ ರೇಖೆಗಳಲ್ಲಿ ಸೂಚಿಸಿದ ಜಾಗಗಳಲ್ಲಿ ಕೆಳಕಂಡ ಷೆಡ್ಯೂಲ್‌ನಲ್ಲಿ ಕಾಣಿಸಿರುವ ಆಳತೆಯ ಕೈರಾನುಗಳನ್ನು (ಕಲ್ಲುಗುಪ್ಪೆಗಳನ್ನು) ನಿರ್ಮಿಸಲು ಮರು ಟೆಂಡರ್ ಎಂದು ಬರೆಯಲಾದ ಹಾಗೂ ಮೊಹರಾದ ಮತ್ತು ಸಹಿ ಮಾಡಲಾದ ಟೆಂಡರ್‌ನ್ನು ನೊಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಆಹ್ವಾನಿಸಿದೆ. ಈ ಮೇಲ್ಕಂಡ ಷರತ್ತುಗಳನ್ನು ಪೂರೈಸಿದ್ದಲ್ಲಿ ಮರು ಟೆಂಡರ್‌ನ್ನು ದಿನಾಂಕ: 18.11.2005ರ ಅಪರಾಹ್ನ 4 ಗಂಟೆಗೆ ಅರಣ್ಯ ಸಂರಕ್ಷಣಾಧಿಕಾರಿಗಳು, ಕಾರ್ಯ ಯೋಜನೆ ಮತ್ತು ಮೋಜಣಿ, ಶಿವಮೊಗ್ಗ ಅಥವಾ ಅವರಿಂದ ಅಧಿಕಾರಿಯುತವಾಗಿ ನಿಯೋಜಿಸಲ್ಪಟ್ಟ ಅಧಿಕಾರಿಯವರಿಂದ ಈ ಕಛೇರಿಯಲ್ಲಿ ಸ್ವೀಕರಿಸಲಾಗುವುದು.

ಷೆಡ್ಯೂಲ್

ಯೂನಿಟ್ ಸಂಖ್ಯೆ	ಕಾಮಗಾರಿಗಳ ವಿವರ	ಆರ್.ಎಫ್.ಕಲ್ಲು ಕಂಬಗಳ ಸಂಖ್ಯೆ (ಅಂದಾಜು)	ಕಲ್ಲುಗುಪ್ಪೆಗಳ ಸಂಖ್ಯೆ (ಅಂದಾಜು)	ಅಂದಾಜು ಮೊತ್ತ ರೂ.ಗಳಲ್ಲಿ	ಇ.ಎಂ.ಡಿ. ರೂ.ಗಳಲ್ಲಿ.
1	2	3	4	5	6
1.	ಸಾಗರ ವಿಭಾಗದ ಮೋಜಣಿ ಮಾಡಿದ ಸೀಮಾರೇಖೆ ಪ್ರದೇಶಗಳಿಗೆ 145 ಸೆಂ.ಮೀ. ಎತ್ತರ, 20 ಸೆಂ.ಮೀ. ಅಗಲ ಹಾಗೂ 15 ಸೆಂ.ಮೀ. ದಪ್ಪ ಹಾಗೂ ತುದಿಯಲ್ಲಿ ವರ್ತುಲಾಕಾರದ ಉತ್ತಮ ಗುಣಮಟ್ಟದ ಸುಟ್ಟ ಸಿಂಗಲ್ ಲೈನ್ ಡ್ರೆಸ್ ಮಾಡಿದ ಕಲ್ಲುಕಂಬಗಳನ್ನು ಸ್ಟೋನ್ ಕ್ವಾರಿಗಳಿಂದ ತಯಾರಿಸಿಕೊಡುವ ಬಗ್ಗೆ.	1716 ಕಲ್ಲು ಕಂಬಗಳು (834+882)	-	389532/-	19500/-
2.	ಸಾಗರ ವಿಭಾಗದ ಮೋಜಣಿ ಮಾಡಿದ ಸೀಮಾರೇಖೆ ಉದ್ದಕ್ಕೂ ಕಲ್ಲುಕಂಬಗಳನ್ನು ತಯಾರು ಮಾಡಿದ ಸ್ಥಳದಿಂದ ಡಿ-ಲೈನಿನ ನೆಡಬೇಕಾದ ಸ್ಥಳಕ್ಕೆ ಸಾಗಾಣಿಕೆ ಮಾಡಿ 60 ಸೆಂ.ಮೀ. 20 ಸೆಂ.ಮೀ. ಮತ್ತು 25 ಸೆಂ.ಮೀ. ಆಳತೆಯ ಗುಂಡಿಗಳನ್ನು ತೋಡಿ ಕಲ್ಲುಕಂಬಗಳ ಮೇಲೆ 5 ಮಿ.ಮೀ. ಆಳವಾಗಿ ನಿಗದಿಪಡಿಸಿದ ಅಕ್ಷರಗಳನ್ನು (ಆರ್.ಎಫ್) ಬಾಣದ ಗುರುತು ಮತ್ತು ಅನುಕ್ರಮ ಸಂಖ್ಯೆಯನ್ನು ಕೊರೆದು ಹಸಿರು ಬಣ್ಣದಿಂದ ಅಕ್ಷರಗಳನ್ನು ಪೆಯಿಂಟ್ ಮಾಡಿ ನೆಟ್ಟು ಕೊಡುವುದರ ಬಗ್ಗೆ (ಬಾಣದ ಗುರುತು ಮುಂದಿನ ಸ್ಟೇಷನನ್ನು ತೋರಿಸುವಂತೆ ಇರಬೇಕು).	1716 ಕಲ್ಲು ಕಂಬಗಳು (834+882)	-	214500/-	10800/-
3.	ಸಾಗರ ವಿಭಾಗದ ಮೋಜಣಿ ಮಾಡಿದ ಸೀಮಾರೇಖೆ ಉದ್ದಕ್ಕೂ ಅಗತ್ಯವಿರುವ ಕಡೆ ಮತ್ತು ವಲಯ ಅರಣ್ಯಾಧಿಕಾರಿಗಳು ಸೂಚಿಸಿದ ಜಾಗದಲ್ಲಿ 2 ಮೀಟರ್ ಉದ್ದದ 60 ಸೆಂ.ಮೀ. ಸುತ್ತಳೆಯ ಬಾಳಿಕೆ ಬರುವಂತಹ ಮರದ ದಿಮ್ಮಿಯನ್ನು ನೆಲದಲ್ಲಿ 30 ಸೆಂ.ಮೀ. ಆಳ ಹುಗಿದು ಗಟ್ಟಿ ಮುಟ್ಟಾದ ಕಾಡು ಕಲ್ಲುಗಳನ್ನು ಆಯ್ದು ಈ ಕಂಬದ ಸುತ್ತಲೂ ಅಂದರೆ ಕಂಬದಿಂದ 1 ಮೀಟರ್ ಅಗಲಕ್ಕೆ ಸುತ್ತಲು ಕಾಡುಕಲ್ಲುಗಳನ್ನು ಕಟ್ಟುತ್ತಾ ಭೂಮಿಯಿಂದ 1.40 ಮೀಟರ್ ಎತ್ತರದವರೆಗೆ ಕಲ್ಲುಗಳನ್ನು ಮುಂಡ ವೃತ್ತಾಕಾರಕ್ಕೆ ಬರುವ ಹಾಗೆ ಕಟ್ಟಬೇಕು ಇದು ಮಧ್ಯದಿಂದ 30 ಸೆಂ.ಮೀ. ಅಗಲ ಇರಬೇಕು (60 ಸೆಂ.ಮೀ.ಡಯ) ಈ ಕಲ್ಲುಗುಪ್ಪೆಯ ಮೇಲೆ 30 ಸೆಂ.ಮೀ. ಉದ್ದದ ಮರದ ದಿಮ್ಮಿ ಕಾಣುತ್ತಿರಬೇಕು. ಈ ದಿಮ್ಮಿಯ ಮೇಲೆ ಆರ್.ಎಫ್. ಎಂಬ ಅಕ್ಷರಗಳು ಅನುಕ್ರಮ ಸಂಖ್ಯೆಗಳನ್ನು ಮತ್ತು ಬಾಣದ ಗುರುತನ್ನು 1 ಸೆಂ.ಮೀ. ಆಳಕ್ಕೆ ಕೆತ್ತಿ, ಹಸಿರು ಬಣ್ಣದಿಂದ ಪೇಯಿಂಟ್ ಮಾಡಬೇಕು. ಈ ಬಾಣದ ಗುರುತು ಮುಂದಿನ ಸ್ಟೇಷನನ್ನು ತೋರಿಸುವಂತೆ ಇರಬೇಕು.		572 ಕೈರಾನ್‌ಗಳು (278+294)	145860/-	7300/-

ಷರತ್ತುಗಳು

1) ಕಲ್ಲುಕಂಬಗಳ ಸರಬರಾಜು ಮತ್ತು ನೆಡುವ ಹಾಗೂ ಕಲ್ಲುಗುಪ್ಪೆಗಳ ಪ್ರಮಾಣ ಅಂದಾಜಿನದ್ದಾಗಿರುತ್ತದೆ. ಟೆಂಡರ್‌ಗಳನ್ನು ಯೂನಿಟ್‌ವಾರು ಪ್ರತ್ಯೇಕವಾಗಿ ಮೊಹರು ಮಾಡಲಾದ ಲಕೋಟೆಯಲ್ಲಿ ಮಾತ್ರ ಸಲ್ಲಿಸಬೇಕು. ಪ್ರತಿ ಯೂನಿಟ್‌ಗಳಿಗೆ ಪ್ರತ್ಯೇಕವಾಗಿ ಟೆಂಡರ್ ದರವನ್ನು ಸೂಚಿಸತಕ್ಕದ್ದು. ಪ್ರತಿ ಟೆಂಡರ್‌ದಾರರು ಎಲ್ಲಾ ಯೂನಿಟ್‌ಗಳಿಗೆ ಕೂಡ ದರವನ್ನು ನಮೂದಿಸುವುದು. ಯಾವುದಾದರು ಯೂನಿಟ್ಟನ್ನು ಕೈಬಿಟ್ಟಿದಲ್ಲಿ ಆ ಟೆಂಡರನ್ನು ತಿರಸ್ಕರಿಸಲಾಗುವುದು.
2) ಮೇಲ್ಕಂಡ ಯೂನಿಟ್‌ಗಳಿಗೆ ಪ್ರತ್ಯೇಕವಾಗಿ ಇ.ಎಂ.ಡಿ. ಹಣ ಡಿ.ಡಿ. ಮೂಲಕ ರಾಷ್ಟ್ರೀಕೃತ ಬ್ಯಾಂಕುಗಳಿಂದ ಅರಣ್ಯ ಸಂರಕ್ಷಣಾಧಿಕಾರಿಗಳು, ಕಾರ್ಯ ಯೋಜನೆ ಮತ್ತು ಮೋಜಣಿ, ಶಿವಮೊಗ್ಗ ಇವರ ಪರವಾಗಿ ಪಡೆದು ಟೆಂಡರುಗಳೊಂದಿಗೆ ಸಲ್ಲಿಸಬೇಕು.
3) ಕಲ್ಲು ಕಂಬಗಳನ್ನು ಸಂಬಂಧಪಟ್ಟ ವಲಯ ಅರಣ್ಯಾಧಿಕಾರಿಗಳು ಗೊತ್ತುಪಡಿಸಿದ ಸ್ಥಳಗಳಿಗೆ ಸರಬರಾಜು ಮಾಡಿ ತೃಪ್ತಿಕರವಾಗಿ ನೆಟ್ಟ ನಂತರ ಹಾಗೂ ವಲಯ ಅರಣ್ಯಾಧಿಕಾರಿಗಳು ಸೂಚಿಸಿದ ಸ್ಥಳಗಳಲ್ಲಿ ಕಲ್ಲುಗುಪ್ಪೆಗಳನ್ನು ತೃಪ್ತಿಕರವಾಗಿ ಕಟ್ಟಿದ ನಂತರ ಮತ್ತು ಅನುದಾನ ಹಣ ಲಭ್ಯದ ಮೇರೆಗೆ ಹಾಗೂ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಯವರ ತಪಾಸಣೆ ನಂತರ ಹಣ ಪಾವತಿಸಲಾಗುವುದು.
4) ಟೆಂಡರ್ ನಮೂನೆಗಳನ್ನು ದಿನಾಂಕ: 18.11.2005ರಂದು ಮಧ್ಯಾಹ್ನ 1.30 ರವರೆಗೆ ಕಛೇರಿ ಕೆಲಸದ ವೇಳೆಯಲ್ಲಿ ನಿಗದಿತ ನಮೂನೆ ಬೆಲೆ ರೂ. 10.00 ಮತ್ತಿತರ ತೆರಿಗೆಗಳೊಂದಿಗೆ ಪಾವತಿ ಮಾಡಿ ಕೆಳಸಹಿದಾರರಿಂದ ಪಡೆಯಬಹುದು.
5) ಟೆಂಡರ್ ಮಂಜೂರಾತಿ ತಿಳಿಸಿದ 7 ದಿನಗಳಲ್ಲಿ ನಿಗದಿಪಡಿಸಿರುವ ಭದ್ರತಾ ಠೇವಣಿ ಹಣ ಜಮಾದೊಂದಿಗೆ ಕರಾರುನಾಮೆ ಮಾಡಿಕೊಳ್ಳಬೇಕು.
6) ಅರಣ್ಯ ಗುತ್ತಿಗೆದಾರರಾಗಿ ನೊಂದಾಯಿಸಿಕೊಳ್ಳಲು ಇಚ್ಛಿಸುವವರು ದಿನಾಂಕ: 18.11.2005ರ ಮಧ್ಯಾಹ್ನ 12 ಗಂಟೆಯವರೆಗೆ ನಿಗದಿ ಮಾಡಿದ ಶುಲ್ಕ ಪಾವತಿಸಿ ನಿಗದಿತ ನಮೂನೆಗಳಲ್ಲಿ ಅರ್ಜಿ ಸಲ್ಲಿಸಿ ನೊಂದಾಯಿಸಿಕೊಳ್ಳಬೇಕು.
7) ಟೆಂಡರ್‌ನ್ನು ಸ್ವೀಕರಿಸಿದ ದಿನಾಂಕದಂದು 4 ಗಂಟೆಯ ನಂತರ ಟೆಂಡರ್‌ದಾರರ ಸಮ್ಮುಖದಲ್ಲಿ ಅಥವಾ ಮರುದಿನ ಹಾಜರಿದ್ದ ಗುತ್ತಿಗೆದಾರರ ಸಮಕ್ಷಮ ತೆರೆಯಲಾಗುವುದು. (ಕಛೇರಿ ವೇಳೆಯಲ್ಲಿ).
8) ಗುತ್ತಿಗೆ ಅವಧಿ ದಿನಾಂಕ: 31.03.2006ರವರೆಗೆ ಇರುತ್ತದೆ.
9) ಇನ್ನಿತರ ವಿವರಗಳನ್ನು ಕಛೇರಿ ಕೆಲಸದ ದಿನಗಳಂದು ಪಡೆಯಬಹುದು.

ಅರಣ್ಯ ಸಂರಕ್ಷಣಾಧಿಕಾರಿ,
ಪಿ.ಆರ್.567 ಕಾರ್ಯಯೋಜನೆ ಮತ್ತು ಮೋಜಣಿ, ಶಿವಮೊಗ್ಗ.

ಅರಣ್ಯ ಇಲಾಖೆ
ಉಪ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು ಗ್ರಾಮಾಂತರ ವಿಭಾಗ, ಬೆಂಗಳೂರು
ನೆಡುತೋಪು ನಿರ್ಮಾಣದ ಮುಂಗಡ ಕಾಮಗಾರಿಗಳ ಬಗ್ಗೆ ಟೆಂಡರ್
ಸಂಖ್ಯೆ:ಎ3.ಬಿಯುಡಿ.ಸಿಆರ್. 108/ 2005-06, ದಿನಾಂಕ: 18ನೇ ಅಕ್ಟೋಬರ್, 2005

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ 2006ರ ಮಳೆಗಾಲದಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು ಗ್ರಾಮಾಂತರ ವಿಭಾಗದಲ್ಲಿ ನೆಡುತೋಪು ನಿರ್ಮಾಣ ಮಾಡಲು 2005-06ನೇ ಸಾಲಿನಲ್ಲಿ D80 BUlldozer (with ripper having side flange attachment) ಬಳಸಿ ಮುಂಗಡ Ripping ಕಾಮಗಾರಿ ಜಾನುವಾರು ನಿರೋಧಕ ಕಂದಕ ತೆಗೆಯುವುದು, ಮುಂಗಡ ಗುಂಡಿಗಳನ್ನು ತೆಗೆಯುವ ಕೆಲಸವನ್ನು ನೆಡುತೋಪು ಬೆಳೆಸುವ ಪ್ರದೇಶದಲ್ಲಿ ಕೈಗೊಳ್ಳಲು ಹಾಗೂ ಸಸ್ಯಕ್ಷೇತ್ರದಲ್ಲಿ ಸಸಿ ಬೆಳೆಸುವ ಕೆಲಸಕ್ಕೆ ನೊಂದಾಯಿತ ಅರಣ್ಯ ಗುತ್ತಿಗೆದಾರರಿಂದ ಟೆಂಡರ್ ಕರೆಯಲಾಗಿದೆ.

ದಿನಾಂಕ: 19.11.2005ರ ಅಪರಾಹ್ನ 3.00 ಗಂಟೆಯೊಳಗೆ ಮೊಹರ ಮಾಡಿದ ಟೆಂಡರ್ ಸಲ್ಲಿಸುವುದು. ಅದೇ ದಿನ ಕೆಳಗೆ ಸಹಿ ಮಾಡಿದವರು ಅಥವಾ ಇವರಿಂದ ಅಧಿಕೃತವಾಗಿ ನೇಮಿಸಲ್ಪಟ್ಟವರು ಸದರಿ ದಿನಾಂಕದಂದು ಟೆಂಡರ್‌ದಾರರ ಸಮ್ಮುಖದಲ್ಲಿ ಟೆಂಡರ್ ಲಕೋಟೆಯನ್ನು ಅಪರಾಹ್ನ 4 ಗಂಟೆಗೆ ತೆರೆಯುವರು ಮತ್ತು ಸದರಿ ದಿನಾಂಕದಂದು ಯಾವುದೇ ಟೆಂಡರ್ ಬಾರದಿದ್ದಲ್ಲಿ ಅಥವಾ ಕಾರಣಾಂತರದಿಂದ ಟೆಂಡರ್ ನಡೆಯದಿದ್ದಲ್ಲಿ ಇದೇ ಪ್ರಕಟಣೆಯ ಷರತ್ತಿಗೆ ಒಳಪಟ್ಟು ಪುನಃ 28.11.2005ರಂದು ಅಪರಾಹ್ನ 4 ಗಂಟೆಗೆ ಎರಡನೆ ಬಾರಿಗೆ ನೊಂದಾಯಿತ ಇಚ್ಛೆಯುಳ್ಳ ಅರಣ್ಯ ಗುತ್ತಿಗೆದಾರರಿಂದ ಭರ್ತಿ ಮಾಡಿದ ಟೆಂಡರ್‌ಗಳನ್ನು ಸ್ವೀಕೃತಿ ಮಾಡಲಾಗುವುದು ಮತ್ತು ಟೆಂಡರ್ ಲಕೋಟೆಯನ್ನು ಅದೇ ದಿನ 4 ಗಂಟೆಗೆ ತೆರೆಯಲಾಗುವುದು. ಈ ಬಗ್ಗೆ ಪ್ರತ್ಯೇಕ ಪ್ರಕಟಣೆ ಹೊರಡಿಸಲಾಗುವುದಿಲ್ಲ.

ಮುಂಗಡ ಕಾಮಗಾರಿಗಳ ವಿವರ

ಕ್ರ. ಸಂ.	ವಲಯದ ಹೆಸರು	ಲೆಕ್ಕಶೀರ್ಷಿಕೆ	ಕಾಮಗಾರಿಯ ಪ್ರದೇಶ	ಭೌತಿಕ ಗುರಿ (ಹೆ.)	ಟೆಂಡರ್‌ನ ಅಂದಾಜು ಮೊತ್ತ (ರೂ.ಗಳಲ್ಲಿ)	ಇ.ಎಂ.ಡಿ. ಮೊತ್ತ	ಕಾಮಗಾರಿ ಪೂರೈಸಬೇಕಾದ ದಿನಾಂಕ
1.	ರಾಮನಗರ	ಅರಣ್ಯ ಸಂರಕ್ಷಣೆ-ಪುನರ್ ಉತ್ಪತ್ತಿ ಕಲ್ಚರಲ್ ಆಪರೇಷನ್-(ಒತ್ತುವರಿ ಸಕ್ರಮಗೊಳಿಸಲು ನೆಡುತೋಪು ಬೆಳೆಸುವುದು)	ದಾಸರಹಳ್ಳಿ	20	3,02,500	30,250	15.12.2005 ರಿಂದ 31.01.2006
2.	ಸಾತನೂರು		ಕೋಣನಗುಂದಿ (ಬಸವನಬೆಟ್ಟ ಆರ್.ಎಫ್)	20	3,02,500	30,250	15.12.2005 ರಿಂದ 31.01.2006
3.	ಹೊಸಕೋಟೆ		ತತ್ತನೂರು	20	30,250	30,250	15.12.2005 ರಿಂದ 31.01.2006

ಕ್ರ. ಸಂ.	ವಲಯದ ಹೆಸರು	ಲೆಕ್ಕಶೀರ್ಷಿಕೆ	ಕಾಮಗಾರಿಯ ಪ್ರದೇಶ	ಭೌತಿಕ ಗುರಿ (ಹೆ.)	ಟೆಂಡರ್‌ನ ಅಂದಾಜು ಮೊತ್ತ (ರೂ.ಗಳಲ್ಲಿ)	ಇ.ಎಂ.ಡಿ. ಮೊತ್ತ	ಕಾಮಗಾರಿ ಪೂರೈಸಬೇಕಾದ ದಿನಾಂಕ
4.	ನೆಲಮಂಗಲ	12ನೇ ಆರ್ಥಿಕ ಆಯೋಗದಿಂದ ಅನುದಾನ (ಅತಿಕ್ರಮಣ ತೆರವು ಪ್ರದೇಶದಲ್ಲಿ ನೆಡುತೋಪು ಬೆಳೆಸುವುದು)	ಸೋಲ ದೇವನಹಳ್ಳಿ	40	6,80,000	68,000	15.12.2005 ರಿಂದ 31.01.2006
5.	ಚನ್ನಪಟ್ಟಣ	ಕ್ಷೀಣಿತ ಅರಣ್ಯ ಅಭಿವೃದ್ಧಿ ಯೋಜನೆ	ಕದರಮಂಗಲ ಎಸ್.ಎಫ್	20	2,56,000	25,600	15.12.2005 ರಿಂದ 31.01.2006

ನಿಬಂಧನೆ

1. ಟೆಂಡರ್ ಫಾರಂಗಳನ್ನು ಫಾರಂಗೆ ರೂ.200.00 ಹಾಗೂ ತೆರಿಗೆ ಪಾವತಿ ಮಾಡಿ ದಿನಾಂಕ: 19.11.2005 ಕಛೇರಿ ಕೆಲಸದ ವೇಳೆಯಲ್ಲಿ ಅಪರಾಹ್ನ 1.00 ಗಂಟೆಯವರೆಗೆ ಪಡೆಯಬಹುದು ಮತ್ತು ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛೆಯುಳ್ಳವರು ಈ ವಿಭಾಗದಲ್ಲಿ 2005-06ನೇ ಸಾಲಿಗೆ ತಮ್ಮ ಹೆಸರನ್ನು ಅರಣ್ಯ ಗುತ್ತಿಗೆದಾರರಾಗಿ ನೊಂದಾಯಿಸಿಕೊಂಡಿರಬೇಕು. ತಪ್ಪಿದ್ದಲ್ಲಿ ಅಂತವರ ಟೆಂಡರ್‌ನ್ನು ಪರಿಗಣಿಸಲಾಗುವುದಿಲ್ಲ.

2. ಭರ್ತಿ ಮಾಡಿದ ಟೆಂಡರ್ ಫಾರಂಗಳನ್ನು ಪ್ರತಿ ಬ್ಲಾಕ್‌ಗೆ ಸಂಬಂಧಿಸಿದಂತೆ ಪ್ರತ್ಯೇಕವಾದ ಮೊಹರು ಮಾಡಿದ ಲಕೋಟೆಯಲ್ಲಿ ಪ್ರತ್ಯೇಕವಾಗಿ ಇಎಂಡಿಯೊಂದಿಗೆ ಸಲ್ಲಿಸುವುದು.

3. ಭರ್ತಿ ಮಾಡಿದ ಟೆಂಡರ್ ಫಾರಂ ಅನ್ನು 19.11.2005ರಂದು ಅಪರಾಹ್ನ 3.00 ಗಂಟೆಯವರೆಗೆ ಉಪ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು ಗ್ರಾಮಾಂತರ ವಿಭಾಗ, ಬೆಂಗಳೂರು ಅಥವಾ ಅವರಿಂದ ನಿಯೋಜಿಸಲ್ಪಟ್ಟ ಅಧಿಕಾರಿಗಳು ಸ್ವೀಕರಿಸುವರು ಮತ್ತು ಮೇಲ್ಕಂಡ ದಿನಾಂಕದಂದು ಯಾವುದೇ ಕಾರಣದಿಂದಾಗಿ ಟೆಂಡರ್ ನಡೆಯದಿದ್ದರೆ ಇದೇ ಪ್ರಕಟಣೆಯ ಷರತ್ತಿಗೆ ಒಳಪಟ್ಟು ಪುನಃ ದಿನಾಂಕ: 28.11.2005ರಂದು ಅಪರಾಹ್ನ 4.00 ಗಂಟೆಯವರೆಗೆ ಟೆಂಡರ್‌ಗಳನ್ನು ಸ್ವೀಕೃತಿ ಮಾಡಲಾಗುವುದು. ಹಾಗೂ ಅದೇ ದಿನ 4 ಗಂಟೆಗೆ ಟೆಂಡರ್‌ನ್ನು ತೆರೆಯಲಾಗುವುದು. ಈ ಬಗ್ಗೆ ಮತ್ತೇ ಪ್ರತ್ಯೇಕವಾದ ಪ್ರಕಟಣೆ ಹೊರಡಿಸುವುದಿಲ್ಲ.

4. ಈ ಸದರಿ ಕಾಮಗಾರಿಗಳು ಕಾಲಬದ್ಧ ಕೆಲಸಗಳಾಗಿದ್ದು, ಒಂದು ಪಕ್ಷ ಯಾವುದಾದರೂ ಕಾಮಗಾರಿಯನ್ನು ಟೆಂಡರ್‌ಗೆ ಮುಂಚೆ ಕೈಗೊಂಡಿದ್ದ ಪಕ್ಷದಲ್ಲಿ ಮತ್ತು ಕೆಲವು ಕೆಲಸಗಳನ್ನು ಕೈಬಿಡಬೇಕಾದ ಸಂದರ್ಭದಲ್ಲಿ ಅಂತಹ ಕೆಲಸಗಳನ್ನು ಈ ಪ್ರಕಟಣೆಯ ಟೆಂಡರ್‌ನಿಂದ ಹೊರತುಪಡಿಸಿ ಉಳಿದ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಟೆಂಡರ್‌ದಾರರಿಗೆ ಕಾಮಗಾರಿ ಕೈಗೊಳ್ಳಲು ಆದೇಶ ನೀಡಲಾಗುವುದು.

5. ಪ್ರತಿ ಟೆಂಡರ್‌ದಾರರು ಈ ಕಾಮಗಾರಿಗಳನ್ನು ನೆರವೇರಿಸಲು ಅಗತ್ಯವಿರುವ BUlldozerನ್ನು ಕಾಮಗಾರಿ ಪ್ರದೇಶಕ್ಕೆ ಸಾಗಾಣಿಕೆ ಮಾಡಲು ಮತ್ತು ಯಂತ್ರಗಳಿಗೆ ಇಂಧನ ವ್ಯವಸ್ಥೆಯನ್ನು ಅವರೇ ಸ್ವಂತವಾಗಿ ಮಾಡಿಕೊಳ್ಳಬೇಕು.

6. ಈ ಮೇಲಿನ ಕೆಲಸಗಳಿಗೆ ಟೆಂಡರ್ ಸಲ್ಲಿಸಲು ಇಚ್ಛಿಸುವ ಗುತ್ತಿಗೆದಾರರು ಆಯಾ ಕೆಲಸಕ್ಕೆ ನಿಗದಿಪಡಿಸುವ ಇಎಂಡಿ ಹಾಗೂ ಭದ್ರತಾ ಠೇವಣಿ ಮೊತ್ತಕ್ಕೆ ಉಪ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು ಗ್ರಾಮಾಂತರ ವಿಭಾಗ, ಬೆಂಗಳೂರು ಇವರ ಪರವಾಗಿ ಯಾವುದಾದರೂ ರಾಷ್ಟ್ರೀಕೃತ ಬ್ಯಾಂಕ್‌ನಿಂದ ಪಡೆದ ಡಿಡಿ ರೂಪದಲ್ಲಿ ಟೆಂಡರ್ ಜೊತೆಗೆ ಸಲ್ಲಿಸಬೇಕಾಗುತ್ತದೆ.

7. ಗುತ್ತಿಗೆದಾರರು ಷರತ್ತುಗಳನ್ನೊಳಗೊಂಡ ಟೆಂಡರ್‌ಗಳನ್ನು ಸಲ್ಲಿಸಿದಲ್ಲಿ ಅಂತಹವನ್ನು ತಿರಸ್ಕರಿಸಲಾಗುವುದು, ಇದರ ಬಗ್ಗೆ ಏನಾದರೂ ತಕರಾರುಗಳು ಉದ್ಭವವಾದಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಬೆಂಗಳೂರು ಗ್ರಾಮಾಂತರ ವಿಭಾಗ, ಬೆಂಗಳೂರು ರವರ ತೀರ್ಮಾನವೇ ಅಂತಿಮವಾಗಿರುತ್ತದೆ.

8. ನಿಗದಿಪಡಿಸಿದ ಅವಧಿಯ ನಂತರ ಬಂದ ಟೆಂಡರ್‌ಗಳನ್ನು ಸ್ವೀಕರಿಸಲಾಗುವುದಿಲ್ಲ.

9. ಯಾವುದೇ ಕಾರಣ ನೀಡದೇ ಟೆಂಡರ್‌ಗಳನ್ನು ಒಪ್ಪುವ ಹಾಗೂ ತಿರಸ್ಕರಿಸುವ ಹಕ್ಕನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು ಗ್ರಾಮಾಂತರ ವಿಭಾಗ, ಬೆಂಗಳೂರು ಇವರು ಕಾಯ್ದಿರಿಸಿಕೊಂಡಿರುತ್ತಾರೆ.

10. ಟೆಂಡರ್‌ನಲ್ಲಿ ಯಶಸ್ವಿಯಾದ ಅರಣ್ಯ ಗುತ್ತಿಗೆದಾರರಿಗೆ ಉಪ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು ಗ್ರಾಮಾಂತರ ವಿಭಾಗ, ಬೆಂಗಳೂರು ಇವರಿಂದ ತಿಳುವಳಿಕೆ ಮಾಡಿದ 7 ದಿವಸಗಳ ಒಳಗಾಗಿ ನಿರ್ದಿಷ್ಟ ನಮೂನೆಯಲ್ಲಿ ಕರಾರು ನಾಮೆಯನ್ನು ಸಹಿ ಮಾಡತಕ್ಕದ್ದು, ಈ ಅವಧಿಯನ್ನು ವಿಸ್ತರಿಸುವ ಅಧಿಕಾರ ಉಪ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು ಗ್ರಾಮಾಂತರ ವಿಭಾಗ, ಬೆಂಗಳೂರು ಇವರು ಹೊಂದಿರುತ್ತಾರೆ.

11. ಈ ಮೇಲಿನ ಕಾಮಗಾರಿಗಳ ಅನುಷ್ಠಾನ ಅರಣ್ಯ ಸಂರಕ್ಷಣಾಧಿಕಾರಿಗಳಿಂದ ವಾರ್ಷಿಕ ಕ್ರಿಯಾಯೋಜನೆಯ ಅನುಮೋದನೆ ನಿಬಂಧನೆಗೆ ಒಳಪಟ್ಟಿರುತ್ತದೆ. ಒಂದು ಪಕ್ಷ ಸರ್ಕಾರದಿಂದ ಹಣ ಬಿಡುಗಡೆ ತಡವಾದ ಪಕ್ಷದಲ್ಲಿ ಅಂತಹ ಹಣ ಪಾವತಿಗಳಿಗೆ ಯಾವುದೇ ತರಹದ ಬಡ್ಡಿ ನೀಡಲಾಗುವುದಿಲ್ಲ.

12. ಎಲ್ಲಾ ಕೆಲಸಗಳು ಆಗಿಂದಾಗ್ಗೆ ಮುಕ್ತಾಯವಾದ ನಂತರ ಸದರಿ ಕೆಲಸಗಳನ್ನು ನಿಯಮದಂತೆ ಸಂಬಂಧಿಸಿದ ಅಧಿಕಾರಿಗಳಿಂದ ತನಿಖೆ ಮಾಡಿಸಿ ವಲಯ ಅರಣ್ಯಾಧಿಕಾರಿಗಳ ಮುಖಾಂತರ ಬಿಲ್ಲುಗಳನ್ನು ಅಳತೆ ಪುಸ್ತಕದೊಂದಿಗೆ (ಎಂ.ಬಿ./ ಎಫ್.ಎನ್.ಬಿ) ಒಪ್ಪಿಸಬೇಕಾಗುತ್ತದೆ ಮತ್ತು ಬಿಲ್ ಸಂದಾಯ ಮಾಡುವಾಗ ಸದರಿ ಬಿಲ್‌ಗಳಲ್ಲಿ ನಿಯಮದಂತೆ ಚಾಲ್ತಿಯಲ್ಲಿರುವ ಆದಾಯ ತೆರಿಗೆ ಮಾರಾಟ ತೆರಿಗೆ, ಸರ್ ಚಾರ್ಜ್ ಮತ್ತು ಭದ್ರತಾ ಠೇವಣಿ ಹಣವನ್ನು ಕಡಿತಗೊಳಿಸಲಾಗುವುದು ಮತ್ತು ಆಗಿಂದಾಗ್ಗೆ ಬದಲಾಗುವ ತೆರಿಗೆಗಳ ವ್ಯತ್ಯಾಸವನ್ನು ಸಹ ನಿಯಮದಂತೆ ಕಡಿತಗೊಳಿಸಲಾಗುವುದು.

13. ಮುಂಗಡ ಕೆಲಸಗಳನ್ನು ನಿರ್ವಹಿಸುವಾಗ ಮುಂಗಡ ಕಾಮಗಾರಿ ಪ್ರದೇಶದ ಅಕ್ಕಪಕ್ಕದ ನೆಡುತೋಪುಗಳ ಗಿಡ ಮರಗಳನ್ನು ಕಡಿದು ನಾಶಪಡಿಸಿದಲ್ಲಿ ಸರ್ಕಾರಕ್ಕೆ ಆದ ನಷ್ಟದ ಬಗ್ಗೆ ಸಂಬಂಧಪಟ್ಟ ಗುತ್ತಿಗೆದಾರರ ಮೇಲೆ ಕಾನೂನಿನ ರೀತ್ಯ ಕ್ರಮ ಜಾರಿಗೊಳಿಸಲಾಗುವುದು.

14. ಕೆಲಸಗಳ ವಿವರಗಳು ಮತ್ತು ಹೆಚ್ಚಿನ ನಿಬಂಧನೆಗಳನ್ನು ಈ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ತಿಳಿದುಕೊಳ್ಳಬಹುದಾಗಿದೆ.

15. ಯಾವುದೇ ವಿಭಾಗದಲ್ಲಿ ಗುತ್ತಿಗೆದಾರರು ಡೀಫಾಲ್ಟರ್ ಆಗಿದ್ದರೆ ಅಂತಹವರು ಟೆಂಡರ್‌ನಲ್ಲಿ ಭಾಗವಹಿಸಲು ಅರ್ಹರಾಗಿರುವುದಿಲ್ಲ.

16. ಗುತ್ತಿಗೆದಾರರು ನೇಮಿಸಿಕೊಳ್ಳುವ ಕೆಲಸಗಾರರಿಗೆ ಸರ್ಕಾರದ ನಿಯಮದಂತೆ ಮಜೂರಿ ಮತ್ತಿತರ ಅನುಕೂಲಗಳನ್ನು ಸ್ವತಃ ಗುತ್ತಿಗೆದಾರರೇ ವಹಿಸಬೇಕು. ಇಲಾಖೆಯು ಗುತ್ತಿಗೆದಾರರ ಮತ್ತು ಅವರ ನೌಕರರಿಗೆ ಯಾವುದೇ ನಷ್ಟ ಇತ್ಯಾದಿಗಳಿಗೆ ಜವಾಬ್ದಾರರಲ್ಲ.

17. ಟೆಂಡರ್‌ನಲ್ಲಿ ನಮೂದಿಸಿದ ಹಣವು ಅಂದಾಜು ಪಟ್ಟಿಗಳ ಅಂದಾಜು ದರವಾಗಿರುತ್ತದೆ (ಅಪ್ರಾಕ್ಸಿಮೇಟ್) ಹಣವನ್ನು ಪಾವತಿಸುವಾಗ ಮಂಜೂರಾದ ಅಂದಾಜು ಪಟ್ಟಿಯಂತೆ ಹಣ ಪಾವತಿಸಲಾಗುವುದು.

18. ಕಾಮಗಾರಿಯನ್ನು ಅರಣ್ಯ ಇಲಾಖೆಯಿಂದ ಪರಿಶೀಲಿಸಿ ಮಂಜೂರಾದ ಅಂದಾಜು ಪಟ್ಟಿಯ ಅನುಗುಣವಾಗಿ ಮಾಡಬೇಕಾಗಿರುತ್ತದೆ. ಕಾಮಗಾರಿಯ ಗುಣಮಟ್ಟವು ವಲಯ ಅರಣ್ಯಾಧಿಕಾರಿ, ಸಹಾಯಕ ಸಂರಕ್ಷಣಾಧಿಕಾರಿಗಳು ಇವರು ಕಾಲಕಾಲಕ್ಕೆ ನೀಡುವ ಲಿಖಿತ/ ಮೌಖಿಕ ಆದೇಶಕನ್ನುಗುಣವಾಗಿ ಇರತಕ್ಕದ್ದು, ಕೆಲಸಗಳಲ್ಲಿ ಏನಾದರು ಪರಿವರ್ತನೆ ಅಥವಾ ಮಾರ್ಪಾಡು ಮಾಡುವುದು ಅವಶ್ಯವೆಂದು ಕಂಡುಬಂದಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಲಿಖಿತ ಆದೇಶದ ಮೇರೆಗೆ ಅಂತಹ ಪರಿವರ್ತನೆ ಅಥವಾ ಮಾರ್ಪಾಡುಗಳನ್ನು ಮಂಜೂರಾದ ದರದಲ್ಲಿಯೇ ಮಾಡಲು ಗುತ್ತಿಗೆದಾರರು ಬದ್ಧರಾಗಿಬೇಕಾಗಿರುತ್ತದೆ.

19. ಮುಂಗಡ ಕಾಮಗಾರಿಗಳನ್ನು ವಲಯ ಅರಣ್ಯಾಧಿಕಾರಿ ಮತ್ತು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ನಿರ್ದೇಶನದಂತೆ ನಿಗದಿತ ಅವಧಿಯಲ್ಲಿ ಕಾಮಗಾರಿಗಳನ್ನು ಪೂರ್ಣಗೊಳಿಸತಕ್ಕದ್ದು ಗುತ್ತಿಗೆಯ ಅವಧಿಯನ್ನು ಸಾಮಾನ್ಯವಾಗಿ ವಿಸ್ತರಿಸಲಾಗುವುದಿಲ್ಲ. ಅತಿ ವಿಶೇಷ ಸಂದರ್ಭಗಳು ಬಂದಲ್ಲಿ ವಿಸ್ತರಣಾ ಅವಧಿಯಲ್ಲಿ ಮಾಡಿದ ಕೆಲಸಗಳಿಗೆ ಗುತ್ತಿಗೆ ದರಗಳಲ್ಲಿ ಶೇ.5 ರಂತೆ ಕಡಿತದೊಂದಿಗೆ ಅವಧಿಯನ್ನು ವಿಸ್ತರಿಸುವ ಅಧಿಕಾರವನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಯವರು ಹೊಂದಿರುತ್ತಾರೆ. ವಲಯ ಅರಣ್ಯಾಧಿಕಾರಿ ಮತ್ತು ಸಹಾಯಕ ಅರಣ್ಯಾಧಿಕಾರಿಗಳು ನೀಡಿದ ನಿರ್ದೇಶನದಂತೆ ಕಾಮಗಾರಿಯನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸದಿದ್ದಲ್ಲಿ ಅಂತಹ ಕಾಮಗಾರಿಗಳಿಗೆ ಹಣವನ್ನು ಪಾವತಿಸಲಾಗುವುದಿಲ್ಲ ಮತ್ತು ಇಎಂಡಿ ಹಾಗೂ ಭದ್ರತಾ ಠೇವಣಿಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

20. ಟೆಂಡರ್‌ನ್ನು ಕಂಪನಿಯ ವತಿಯಿಂದ/ ಸಂಘ ಸಂಸ್ಥೆಗಳು ಕೊಡುವ ಪಕ್ಷದಲ್ಲಿ.

ಅ) ಕಂಪನಿಯು/ ಸಂಘ ಸಂಸ್ಥೆಗಳ ನೊಂದಾಯಿತ ಸಂಸ್ಥೆಗಳಾಗಿರಬೇಕು.

ಆ) ಕಂಪನಿಯ ಎಲ್ಲಾ ಪಾಲುದಾರರಿಗೆ ಟೆಂಡರ್‌ನ್ನು ಸಹಿ ಮಾಡಲು ಸಾಧ್ಯವಾಗದಿದ್ದಲ್ಲಿ, ಟೆಂಡರ್ ಸಹಿ ಮಾಡುವ ವ್ಯಕ್ತಿಯು ಈ ಬಗ್ಗೆ ಅಧಿಕಾರ ಪತ್ರ (Power of Attorney) ಪಡೆದುಕೊಂಡವನಾಗಿರಬೇಕು. ಇಂತಹ ಪತ್ರವನ್ನು ಟೆಂಡರ್‌ಗೆ ಲಗತ್ತಿಸಬೇಕು.

21. ಅರಣ್ಯ ಕೂಲಿಕಾರರ ಸಹಕಾರ ಸಂಘಗಳು ಈ ಕೆಲಸಗಳಿಗೆ ಟೆಂಡರ್ ಕೊಡಲು ಇಚ್ಛಿಸಿದಲ್ಲಿ ಇಎಂಡಿ ಮತ್ತು ಭದ್ರತಾ ಠೇವಣಿಯಾಗಿ ಕಡ್ಡಾಯವಾಗಿ ನೀಡಬೇಕಾಗುವುದು. ಹಾಗೂ ಸಂಘಗಳ ನೊಂದಾಣಿ ನಿಯಮದಂತೆ ಸಂಘಗಳು ಕಡ್ಡಾಯವಾಗಿ ನೊಂದಾಣಿಯಾಗಿರಬೇಕು ಇಲ್ಲವಾದಲ್ಲಿ ಟೆಂಡರ್‌ನ್ನು ತಿರಸ್ಕರಿಸಲಾಗುವುದು.

22. ಯಶಸ್ವಿ ಟೆಂಡರ್‌ದಾರರು ಕರಾರು ನಾಮೆಯನ್ನು ಸಹಿ ಮಾಡಿದ ನಂತರ ಟೆಂಡರ್‌ನ್ನು ಹಿಂತೆಗೆದುಕೊಂಡಲ್ಲಿ, ನಿಗದಿತ ಸಮಯದಲ್ಲಿ ಕಾಮಗಾರಿ ಪ್ರಾರಂಭಿಸದಿದ್ದಲ್ಲಿ, ಕಾಮಗಾರಿಯ ಬಗ್ಗೆ ನಿರಾಸಕ್ತಿ ಹೊಂದಿದಲ್ಲಿ ಅಂತಹ ಟೆಂಡರ್‌ದಾರರ ಇಎಂಡಿ ಮತ್ತು ಭದ್ರತಾ ಠೇವಣಿಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದಲ್ಲದೆ ಗುತ್ತಿಗೆ ಕೆಲಸವನ್ನು ಮೂಲ ಗುತ್ತಿಗೆದಾರರ ಖರ್ಚು ಮತ್ತು ಜವಾಬ್ದಾರಿಯ ಮೇಲೆ ಮರು ಟೆಂಡರ್ ಮಾಡಲಾಗುವುದು ಟೆಂಡರ್‌ಗೆ ಕಾಲವಕಾಶ ಇಲ್ಲದಿದ್ದಲ್ಲಿ ಇಲಾಖೆಯಿಂದ ಕಾಮಗಾರಿಯನ್ನು ಪೂರ್ಣಗೊಳಿಸಿ ಸರ್ಕಾರಕ್ಕೆ ಹಾನಿಯಾದ ಮೊತ್ತವನ್ನು ಕರ್ನಾಟಕ ಅರಣ್ಯ ಸಂಹಿತೆ 1963 ಕಾಲಂ 109 ಮತ್ತು 119ರಂತೆ ಭೂಕಂದಾಯ ಬಾಕಿ ವಸೂಲಿಯಂತೆ ವಸೂಲು ಮಾಡಲಾಗುವುದು.

23. ಯಶಸ್ವಿಯಾದ ಬಿಡ್ಡ್‌ದಾರರು ಕಾಮಗಾರಿಗಳನ್ನು ಪೂರ್ಣಗೊಳಿಸಿದ ನಂತರ ಹಣ ಪಾವತಿಸುವಾಗ ಬಿಲ್ಲಿನ ಮೊತ್ತದ ಶೇ.5ರಷ್ಟು ಮೊತ್ತವನ್ನು ಭದ್ರತಾ ಠೇವಣಿಯಾಗಿ ಹಿಡಿಯಲಾಗುವುದು, ಈ ಹಣವನ್ನು ನೆಡುತೋಪು ನಿರ್ಮಾಣದ ಬಗ್ಗೆ ವಲಯ ಅರಣ್ಯಾಧಿಕಾರಿಗಳು ಮತ್ತು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳಿಂದ ದೃಢೀಕರಣ ಪತ್ರ ನೀಡಿದ ನಂತರ ಭದ್ರತಾ ಠೇವಣಿ ಮೊತ್ತವನ್ನು ಹಿಂದಿರಿಗಿಸಲಾಗುವುದು.

24. ಕೆಲಸ ಪೂರ್ಣಗೊಂಡ ದಿನಾಂಕದಿಂದ 1 ವರ್ಷದ ಒಳಗಾಗಿ ಕಾಮಗಾರಿಯಲ್ಲಿ ಯಾವುದೇ ದೋಷ ಕಂಡುಬಂದಲ್ಲಿ ಗುತ್ತಿಗೆದಾರರು ತಮ್ಮ ಸ್ವಂತ ಖರ್ಚಿನಲ್ಲಿ ದೋಷ ಪರಿಹರಿಸಬೇಕಾಗುವುದು. ನಂತರ ಭದ್ರತಾ ಠೇವಣಿ ಹಿಂತಿರುಗಿಸಲಾಗುವುದು. ತಪ್ಪಿದಲ್ಲಿ ಭದ್ರತಾ ಠೇವಣಿಯಲ್ಲಿ ಸದರಿ ಖರ್ಚನ್ನು ಭರಿಸಲಾಗುವುದು.

25. ಗುತ್ತಿಗೆದಾರರು ನೇಮಿಸಿಕೊಂಡಿರುವ ಕೂಲಿ ಕಾರ್ಮಿಕರಿಗೆ ಅಪಘಾತ/ ಇನ್ನಿತರೆ ಹಾನಿಗಳು ಸಂಭವಿಸಿದಲ್ಲಿ ನಷ್ಟ ಪರಿಹಾರವನ್ನು ಗುತ್ತಿಗೆದಾರರೇ ನೀಡಬೇಕಾಗುತ್ತದೆ.

26. ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಲಿಖಿತ ಅನುಮತಿ ಇಲ್ಲದೇ ಯಾವುದೇ ಕೆಲಸವನ್ನು ಟೆಂಡರುದಾರರು ಪ್ರಾರಂಭಿಸಬಾರದು.

27. ಟೆಂಡರ್ ಫಾರಂ ನೀಡುವ ದಿನಗಳಲ್ಲಿ ಗುತ್ತಿಗೆದಾರರ ನೊಂದಣಿಯನ್ನು ಮಾಡಲಾಗುವುದಿಲ್ಲ.

28. ಕಾಲ ಕಾಲಕ್ಕೆ ಉಪ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು ಗ್ರಾಮಾಂತರ ವಿಭಾಗರವರು ವಿಧಿಸುವ ಷರತ್ತಿಗೆ ಗುತ್ತಿಗೆದಾರರು ಬದ್ಧರಾಗಿರಬೇಕು.

ಉಪ ಅರಣ್ಯ ಸಂರಕ್ಷಣಾಧಿಕಾರಿ,
ಬೆಂಗಳೂರು ಗ್ರಾಮಾಂತರ ವಿಭಾಗ.

ಪಿ.ಆರ್.566

ಕರ್ನಾಟಕ ಲೋಕಸೇವಾ ಆಯೋಗ
ಲೋಕಸೇವಾ ಆಯೋಗ ಕಛೇರಿ, "ಪಾರ್ಕ್ ಹೌಸ್", ಬೆಂಗಳೂರು
ತಿದ್ದುಪಡಿ

ಸಂಖ್ಯೆ:ಇ.ಪ.(2) 1950/ 2005-06/ ಪಿಎಸ್‌ಸಿ, ದಿನಾಂಕ:15ನೇ ಅಕ್ಟೋಬರ್, 2005

ದಿನಾಂಕ: 07.04.2005ರ ಕರ್ನಾಟಕ ರಾಜ್ಯಪತ್ರದ ಭಾಗ-5ರಲ್ಲಿ ಪ್ರಕಟಿಸಲಾಗಿರುವ 2004ನೇ ದ್ವಿತೀಯ ಅಧಿವೇಶನದ ಇಲಾಖಾ ಪರೀಕ್ಷೆ ಫಲಿತಾಂಶವನ್ನು ಅದರಲ್ಲಿ ಬೆಂಗಳೂರು ಕೇಂದ್ರಕ್ಕೆ ಸಂಬಂಧಿಸಿದಂತೆ ಅಪೆಂಡಿಕ್ಸ್-'ಎ' ರಡಿಯಲ್ಲಿ "ಎಸ್.ಎ.ಎಸ್. ಭಾಗ-3" ವಿಷಯ ಕುರಿತಂತೆ ಸಾಮಾನ್ಯ ದರ್ಜೆ ಅಡಿ ಇರುವ ನೊಂದಣಿ ಸಂಖ್ಯೆಗಳೊಂದಿಗೆ ನೊಂದಣಿ ಸಂಖ್ಯೆ: 05116 ಅನ್ನು ಸೇರಿಸಿ ಓದಿಕೊಳ್ಳತಕ್ಕದ್ದು.

ಕಾರ್ಯದರ್ಶಿ
ಹಾಗೂ ಇಲಾಖಾ ಪರೀಕ್ಷೆಗಳ ನಿಯಂತ್ರಕರು
ಕರ್ನಾಟಕ ಲೋಕಸೇವಾ ಆಯೋಗ, ಬೆಂಗಳೂರು.

ಪಿ.ಆರ್.568

PWD, SHIMOGA DIVISION, SHIMOGA
TENDER NOTIFICATION
(TWO COVER SYSTEM)
No. EE/ PWD/ SMG/ AE-2/ TND-22/2005-06/2559, Dated: 14th October, 2005

Sealed Item rate tenders in duplicate in Two covers are invited from the Registered KPWD/ CPWD/ MES Contractors for the work noted below and will be received by the undersigned in this office upto 4.30 pm (IST) on the date noted below subject to the condition laid down in form No. PWG-65, KPWD code Vol-II and Karnataka Transparency in Public Procurement Ordinance-2000. The Tenders (Cover-I) will be opened by the undersigned at his office at 5.00pm on the same day if possible. Otherwise, on the next working day.

